ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ನವೆಂಬರ್ 2023 ಮಾಸ ಪತ್ರಿಕೆ

ಸಂಪುಟ/Volume : 46
ಸಂಚಿಕೆ/Issue : 02
ಪುಟ/Pages : 12
ಬೆಲೆ/Price : ₹ 15/–

ವಿದ್ಯಾ ಪರಾ ದೇವತಾ

**Akhila Karnataka Shikshaka Samachar | November 2023 | Monthly**






**A Journal of Karnataka Rajya Madhyamika Shikshaka Sangha (R.)**

## ಸಂಪಾದಕೀಯ

ಕನ್ನಡ ಡಿಂಡಿಮ ಬಾರಿಸುವ ಹಬ್ಬ ಕನ್ನಡದ ಹಬ್ಬ. ಕನ್ನಡಿಗರೆಲ್ಲ ಇಂದಿನ ಕರ್ನಾಟಕದ ಸುತ್ತಲಿರುವ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಗೋವಾ, ಕೇರಳ ಭಾಗದಲ್ಲಿ ಚದುರಿ ಹೋಗಿದ್ದ ಕಾಲವೊಂದಿತ್ತು. ನಾವೆಲ್ಲ ಒಂದಾಗಬೇಕು ಎನ್ನುವ ಕಾರಣಕ್ಕಾಗಿ ಕನ್ನಡ ನಾಡು ನುಡಿಯನ್ನು ರಕ್ಷಿಸಬೇಕೆನ್ನುವುದಕ್ಕಾಗಿ ನಡೆದ ಚಳುವಳಿಗಳನ್ನು ಸ್ಮರಿಸಿಕೊಳ್ಳುವ ತಿಂಗಳು ಈ ನವೆಂಬರ್. ಪ್ರತಿವರ್ಷ ನವೆಂಬರ್ ಬಂತೆಂದರೆ ಕನ್ನಡಿಗರಿಗೆಲ್ಲ ಒಂದು ಹಬ್ಬದ ಅನುಭವ. ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲ, ಕನ್ನಡಿಗರು ನೆಲೆಸಿರುವ ಸುತ್ತಲಿನ ರಾಜ್ಯಗಳಲ್ಲಿ, ದೇಶದ ರಾಜಧಾನಿ ದೆಹಲಿಯ ಕನ್ನಡ ಸಂಘಗಳು ಕನ್ನಡದ ಬೆಳವಣಿಗೆಗಾಗಿ ಶ್ರಮಿಸುತ್ತಾ ಬಂದಿವೆ. ಅಮೇರಿಕಾದಂತಹ ದೇಶದಲ್ಲಿಯೂ ಸಹ 'ಅಕ್ಕ' ಅಮೇರಿಕಾದ ಕನ್ನಡ ಸಂಘ ಕನ್ನಡದ ಕಂಪನ್ನು ವಿದೇಶದಲ್ಲಿಯೂ ಪಸರಿಸಲು ಶ್ರಮವಹಿಸುತ್ತಿದೆ. ಒಟ್ಟಾರೆ ಕನ್ನಡದ ತಿಂಗಳು ಈ ನವೆಂಬರ್. ಕನ್ನಡ ಎಂದಿಗೂ ಕಣ್ಮರೆಯಾಗುವುದಿಲ್ಲ. ಆದರೆ ಕನ್ನಡದ ಬೆಳವಣಿಗೆಗೆ ನಾವೆಲ್ಲ ಒಂದು ಹೆಜ್ಜೆ ಮುಂದೆ ಇಟ್ಟು ಶ್ರಮಿಸಬೇಕಿದೆ.

ಅಜ್ಞಾನದಿಂದ ಜ್ಞಾನದೆಡೆಗೆ ಕತ್ತಲೆಯಿಂದ ಬೆಳಕಿನಡೆಗೆ ಸಾಗಬೇಕು ಎನ್ನುವ ಸಂದೇಶವನ್ನು ಹೊತ್ತು ಬರುವ 'ದೀಪಾವಳಿ' ನಮ್ಮ ನಿತ್ಯ ಜೀವನಕ್ಕೆ ಅನೇಕ ಸಂದೇಶವನ್ನು ನೀಡಿದೆ. ದೇಶದ ಉದ್ದಗಲಕ್ಕೂ ಆಚರಿಸುವ ಈ ಹಬ್ಬ ಕೆಟ್ಟಗುಣವನ್ನು ಸುಟ್ಟು, ಒಳ್ಳೆಯ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಸಂದೇಶ ನೀಡುವ ಈ ಹಬ್ಬ ನಮಗೆಲ್ಲ ಹೊಸತನವನ್ನು ನೀಡುತ್ತದೆ. ದೀಪಗಳ ಹಬ್ಬ ದೀಪಾವಳಿ ನಮಗೆಲ್ಲ ಮಹಾಭಾರತದ ಪೌರಾಣಿಕ ಮಹಾಕಾವ್ಯದ ಘಟನೆಗಳನ್ನು ಪರಿಚಯಿಸುವುದರೊಂದಿಗೆ ಅಲ್ಲಿನ ದುಷ್ಟ ಸಂಹಾರವು ಮತ್ತು ಶಿಷ್ಟ ರಕ್ಷಣೆಯು ಇಂದಿಗೂ ಪ್ರಸ್ತುತವಾಗಿದೆ.

ನವೆಂಬರ್ 26 ಭಾರತೀಯರೆಲ್ಲರಿಗೂ ಹೆಮ್ಮೆ ಪಡುವ ದಿನ. ನಮ್ಮ ಸಂವಿಧಾನವನ್ನು ನಾವೇ ರಚಿಸಿಕೊಂಡು, ಅದನ್ನು ನಮಗೆ ನಾವೇ ಅರ್ಪಿಸಿಕೊಂಡು ಅದನ್ನು ಆಚರಣೆಯಲ್ಲಿ ತರಲು 1949 ನವೆಂಬರ್-26 ರಂದು ಸಂವಿಧಾನ ರಚನಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದ ದಿನ. ಅದನ್ನು ಅಂದಿನಿಂದ "ಸಂವಿಧಾನ ದಿನ" ವಾಗಿ ಆಚರಿಸುತ್ತಾ ಬಂದಿದ್ದೇವೆ. ಈ ದಿನವನ್ನು ಪ್ರಪಂಚದ ಬೃಹತ್ "ಪ್ರಜಾಪ್ರಭುತ್ವ" ಸರ್ಕಾರ ಹೊಂದಿರುವ ನಾವುಗಳೆಲ್ಲ ಹೆಮ್ಮೆಯಿಂದ ಆಚರಿಸುವುದು ನಮ್ಮೆಲ್ಲರ ಕರ್ತವ್ಯ.

ಸಮಾಜವನ್ನು ತಮ್ಮ ಕೀರ್ತನೆಗಳ ಮೂಲಕ ಎಚ್ಚರಿಸುತ್ತ, ಸಂಪದ್ಭರಿತವಾದ ಜೀವನವನ್ನು ತೊರೆದು, ಆಧ್ಯಾತ್ಮಿಕ ಸಂಪತ್ತನ್ನು ಗಳಿಸಿ ಭಕ್ತಿಯ ಮೂಲಕ ಶ್ರೀ ಕೃಷ್ಣನನ್ನು ಒಲಿಸಿಕೊಂಡ ಮಹಾನ್ ಕೀರ್ತನಕಾರ ದಾಸ ಶ್ರೇಷ್ಠ ಕನಕದಾಸರ ಜಯಂತಿಯನ್ನು ನಾವು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅವರು ಸಾರಿರುವ ಸರಳ ಜೀವನ ಮತ್ತು ಆಧ್ಯಾತ್ಮಿಕದ ಶಕ್ತಿಯನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕಿದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಕರ್ನಾಟಕದಲ್ಲಿ ಕನ್ನಡದ ದುಸ್ಥಿತಿ 3
- ಕರ್ನಾಟಕ ಏಕೀಕರಣದ ಇತಿಹಾಸ 5
- ದೀಪಾವಳಿ-ಹಿನ್ನಲೆ & ಮಹತ್ವ 6
- ವಿದ್ಯಾರ್ಥಿ ಬಾಳಲ್ಲಿ ಸಮಯವೇ ಸಂಪತ್ತು 7
- ಸಾಮಾಜಿಕ ಪರಿವರ್ತನೆಯಲ್ಲಿ ಕನಕದಾಸರು 11
- ಅಂಗವಿಕಲತೆಯನ್ನು ಮೀರಿ ಸಾಧನೆಯ ಶಿಖರವೇರಿದ ಭಾರತದ ದಿಟ್ಟ ಯುವತಿ ಶೀತಲ್ ದೇವಿ 12




# ಕರ್ನಾಟಕದಲ್ಲಿ ಕನ್ನಡದ ದುಸ್ಥಿತಿ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

'ಕರ್ನಾಟಕದಲ್ಲಿ ಕನ್ನಡದ ಸ್ಥಿತಿ' ಲೇಖನ ಬರೆಯಬೇಕು ಎಂದು ಅನ್ನಿಸಿದಾಗ ನನಗೆ ಅಮೇರಿಕೆಯಲ್ಲಿ ಅನುಭವಕ್ಕೆ ಬಂದ ಘಟನೆ ನೆನಪಾಯಿತು. 2014ರ ಆಗಸ್ಟ್ 29ರಿಂದ 31ರವರೆಗೆ ಅಮೇರಿಕೆಯ ಪಶ್ಚಿಮ ತೀರದಲ್ಲಿರುವ ಸಿಲಿಕಾನ್‌ವ್ಯಾಲಿ ಎಂದು ಕರೆಸಿಕೊಳ್ಳುವ ನಗರದ ಸಮುಚ್ಚಯದ ಸ್ಯಾನ್‌ಹೊಸೆಯಲ್ಲಿ 8ನೇ ಅಕ್ಕಸಮ್ಮೇಳನ ನಡೆಯಿತು. (Akka- Association Of Kannada Kootas Of America) ನಾನು ಆಗ ಅಮೇರಿಕೆಯ ಪೋರ್ಟ್‌ಲ್ಯಾಂಡ್ ನಗರದಲ್ಲಿದ್ದ ನನ್ನ ಮಗಳ ಮನೆಗೆ ಹೋಗಿದ್ದರಿಂದ ಅಕ್ಕ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಹೋಗಿದ್ದೆ. 3 ದಿನ ನಡೆದ ಸಮ್ಮೇಳನ ಬಹಳ ವಿಜ್ರಂಭಣೆಯಿಂದ ಸಾಗಿತು. ನೂರಾರು ಕನ್ನಡಿಗರು ತಮ್ಮ ಕುಟುಂಬ ಸಮೇತ ಬಂದಿದ್ದರು. ಕರ್ನಾಟಕದಿಂದಲೂ ಹಲವರು ವಿಶೇಷ ಅತಿಥಿಗಳಾಗಿ ಬಂದಿದ್ದರು. ಸಮ್ಮೇಳನವನ್ನು ಉಡುಪಿಯ ಮಠದ ಸ್ವಾಮಿಗಳು ಉದ್ಘಾಟಿಸಿದರು. ಅನೇಕ ಬಗೆಯ ಕಾರ್ಯಕ್ರಮಗಳು ನಡೆದುವು. ಸಮ್ಮೇಳನದಲ್ಲಿ ಪ್ರಮುಖ ಭಾಷಣ ಮಾಡಿದ ಎಲ್ಲರೂ "ನಾವೆಲ್ಲ ಕನ್ನಡಿಗರು ನಮ್ಮ ಕನ್ನಡತನವನ್ನು ಉಳಿಸಿಕೊಳ್ಳಬೇಕು. ನಮ್ಮ ಮಾತೃಭಾಷೆ ಕನ್ನಡವನ್ನು ಮರೆಯಬಾರದು. ನಮ್ಮ ಮನೆಯಲ್ಲಿ ಕನ್ನಡದಲ್ಲೇ ಮಾತನಾಡಬೇಕು. ನಮ್ಮ ಮಕ್ಕಳಿಗೂ ಕನ್ನಡ ಕಲಿಸಬೇಕು' ಎಂದು ಉದ್ದುದ್ದ ಭಾಷಣ ಮಾಡಿದರು. ಮುಖ್ಯ ಸಭಾಂಗಣದ ಪಕ್ಕದಲ್ಲೇ ಒಂದು ಕಿರು ಸಭಾಂಗಣ ಇತ್ತು. ಉದ್ದುದ್ದ ಭಾಷಣ ಮಾಡಿದವರ ಮಕ್ಕಳೆಲ್ಲಾ ಈ ಕಿರು ಸಭಾಂಗಣದಲ್ಲಿ ಆಟ ಆಡಿ ಸುಸ್ತಾಗಿ ಒಂದೆಡೆ ಗುಂಪಾಗಿ ಕುಳಿತಿದ್ದರು. ನಾನು ಅವರನ್ನು ಮಾತನಾಡಿಸಲು ಹೋದೆ. ಅವರ ಹೆಸರನ್ನು ಕೇಳಿದೆ. ಇಂಗ್ಲೀಷ್‌ನಲ್ಲೇ ಉತ್ತರಿಸಿದರು. ನಿಮ್ಮ ತಂದೆ ತಾಯಿಯವರ ಮಾತೃಭಾಷೆ ಯಾವುದೆಂದು ಕೇಳಿದೆ. 'ಕನ್ನಡ' ಎಂದು ಉತ್ತರಿಸಿದರು. ನಾನು ಕನ್ನಡದಲ್ಲಿ ಪ್ರಶ್ನೆ ಕೇಳುತ್ತಿದ್ದರೆ ಅವರು ಇಂಗ್ಲೀಷ್‌ನಲ್ಲೇ ಉತ್ತರಿಸುತ್ತಿದ್ದರು. ಕೊನೆಯ ಪ್ರಶ್ನೆಯಾಗಿ ನೀವೇಕೆ ಪರಸ್ಪರ ಕನ್ನಡದಲ್ಲಿ ಮಾತನಾಡುವುದಿಲ್ಲ? ಎಂದು ಕೇಳಿದೆ. ಅದಕ್ಕೆ ಅವರೆಲ್ಲಾ ಸಾಮೂಹಿಕವಾಗಿ 'Sir, you better learn English' ಎಂದು ಕೂಗಿದರು. ಆದರೆ ಒಂದೆರಡು ಮಕ್ಕಳು ಮಾತ್ರ ಆ ನಂತರ ನನ್ನ ಬಳಿ ಬಂದು ಕನ್ನಡದಲ್ಲಿ ಮಾತನಾಡಿಸಿದರು.

ಈಗ ಸ್ಯಾನ್‌ಹೊಸೆ ಇಂದ ಬೆಂಗಳೂರಿಗೆ ಬರೋಣ. ನಾನು ವಾಕಿಂಗ್ ಮಾಡುವ ನಮ್ಮನೆ ಎದುರು ಇರುವ ಆಟದ ಮೈದಾನಕ್ಕೆ ತುಂಬಾ ಮಕ್ಕಳು ಬರುತ್ತಾರೆ. ಅವರೂ ಸಹ ಪರಸ್ಪರ ಮಾತನಾಡಿಕೊಳ್ಳುವುದು ಇಂಗ್ಲೀಷ್‌ನಲ್ಲೇ! ಕೇಳಿದರೆ ನಾವು ಓದುವುದು ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ We can understand Kannada but we can't speak ಅನ್ನುತ್ತಾರೆ! ಈ ಮಕ್ಕಳ ಜತೆ ಬರುವ ಪೋಷಕರೂ ಮಕ್ಕಳೊಂದಿಗೆ ಮಾತನಾಡುವುದು ಇಂಗ್ಲೀಷ್‌ನಲ್ಲೇ! ನಾನು ಸಾಮಾನ್ಯವಾಗಿ ಆಟೋರಿಕ್ಷಾದಲ್ಲೇ ಓಡಾಡುವುದು. ಎಲ್ಲ ಚಾಲಕರೊಂದಿಗೆ ಹರಟೆ ಹೊಡೆದುಕೊಂಡೇ ಪಯಣಿಸುತ್ತೇನೆ. ನೂರಕ್ಕೆ ನೂರರಷ್ಟು ಚಾಲಕರು ಹಳ್ಳಿಗಳಿಂದಲೇ ಬಂದವರು. ಅದೂ ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಜಿಲ್ಲೆಯವರು. ಕಡಿಮೆ ಜನ ಉತ್ತರ ಕರ್ನಾಟಕದವರೂ ಇದ್ದಾರೆ. ನಾನು ಸಾಮಾನ್ಯವಾಗಿ ಅವರನ್ನು ಕೇಳುವುದು ಅವರ ಪರಿವಾರದ ಬಗ್ಗೆ, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ. ಅವರೆಲ್ಲರೂ ಹೇಳುವುದು ಒಂದೇ ಉತ್ತರ. "ಅನಿವಾರ್ಯವಾಗಿ ನಾವು ನಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಿದ್ದೇವೆ. ಫೀಸು ಜಾಸ್ತಿ, ಆದರೆ ನಮ್ಮ ಮಕ್ಕಳೂ ಇಂಗ್ಲೀಷ್ ಕಲಿತು ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕು ಆಗಲೇ ಅವರಿಗೆ ಭವಿಷ್ಯ ಇರುವುದು". ಕನ್ನಡ ಮಾಧ್ಯಮದಲ್ಲಿ ಓದಿದವರೂ ಅತ್ಯುಚ್ಚ ಸ್ಥಾನವನ್ನು ಗಳಿಸಿದ್ದಾರೆ ಎಂದು ಯಾವ ಬಗೆಯಲ್ಲಿ ಹೇಳಿದರೂ ಅವರು ಕೇಳುವ ಸ್ಥಿತಿಯಲ್ಲಿ ಇಲ್ಲ.

ವಿದ್ಯಾವಂತರನ್ನು ಬಿಡಿ, ಹೆಚ್ಚು ಕಲಿತಿಲ್ಲದವರಿಗೂ ಈಗ ಆಂಗ್ಲ ಮಾಧ್ಯಮ ವ್ಯಾಮೋಹ ಇಂಗ್ಲೀಷ್ ಮಾಧ್ಯಮದಲ್ಲಿ ಓದಿದರೇ ಸಾಫ್ಟ್‌ವೇರ್ ಇಂಜಿನಿಯರಾಗುವುದು, ಹೆಚ್ಚು ಹೆಚ್ಚು ಹಣ ಸಂಪಾದಿಸುವುದು ಎಂಬ ನಂಬಿಕೆ. ಹಾಗಾದರೆ ಕನ್ನಡ ಮಾಧ್ಯಮದಲ್ಲಿ ಕಲಿಯುವವರು ಯಾರು? ಕೂಲಿನಾಲಿ ಮಾಡಿ ಬದುಕುತ್ತಿರುವವರ ಮಕ್ಕಳು, ಆರ್ಥಿಕ ಅನುಕೂಲವಿಲ್ಲದವರ ಮಕ್ಕಳು "ಇಂಗ್ಲೀಷ್ ಮಾಧ್ಯಮದಲ್ಲಿ ಓದಿದರೆ ನಿಮಗಾಗುವ ತೊಂದರೆ ಏನು?" ಎಂದು ಮರು ಪ್ರಶ್ನಿಸುವವರು ಅನೇಕರು. ಹೌದು ಖಂಡಿತ ತೊಂದರೆಯಾಗುತ್ತದೆ, ವ್ಯಕ್ತಿಗಳಿಗಲ್ಲ ಆ ಭಾಷೆಯ ಸಮುದಾಯಕ್ಕೆ. ಒಂದು ನಾಗರೀಕತೆಯ ಉತ್ಥಾನ– ಪತನಗಳೆಲ್ಲಾ ಅಂಕಿತವಾಗುವುದು ಭಾಷೆಯ ಮಾಧ್ಯಮದಿಂದ. ಪ್ರತಿಭಾಷೆಯೂ ವಿಕಾಸಗೊಂಡ ಮಜಲುಗಳನ್ನು ಗಮನಿಸಿದಲ್ಲಿ ಅದು ಆಯಾ ಜನ ಸಮುದಾಯದ ಇತಿಹಾಸದ ಪದ ಚಿಹ್ನೆಯೇ ಆಗಿರುತ್ತದೆ. ಅದು ಆ ಭೂಪ್ರದೇಶದ ರಾಷ್ಟ್ರೀಯತೆಯ

ಪುಟ 4 ಕ್ಕೆ ➤

➢ ಪುಟ 3 ರಿಂದ.....

ಪ್ರತಿಬಿಂಬವೇ ಆಗಿರುತ್ತದೆ. ಭಾಷೆ ನಾಶವಾದಲ್ಲಿ ರಾಷ್ಟ್ರೀಯತೆಯೂ ನಷ್ಟವಾಗುತ್ತದೆ.

ಕರ್ನಾಟಕದಲ್ಲಿ ಕನ್ನಡ ಮಾತೃಭಾಷಿಕರ ಸಂಖ್ಯೆ ಶೇಕಡಾ 66.54 ಮಾತ್ರ ಅದೇ ರಾಜಧಾನಿ ಬೆಂಗಳೂರಿನಲ್ಲಿ ಇದು 44.51. ಈ ತಥಾಕಥಿತ ಕನ್ನಡಿಗರಲ್ಲೂ ಇಂದಿನ ಪೀಳಿಗೆ ಗೆಳೆಯರೊಂದಿಗೆ ಸಂಭಾಷಿಸುವ ಭಾಷೆ ಇಂಗ್ಲೀಷೇ. ಇದಕ್ಕೆ ಕಾರಣವೇನು? ಮುಖ್ಯವಾಗಿ ಎರಡು 1) ಕನ್ನಡಿಗರಿಗೆ ಸ್ವಭಾಷಾಭಿಮಾನ ಕಡಿಮೆ 2) ಎಲ್ಲದಕ್ಕೂ ಹೊಂದಿಕೊಳ್ಳುವ ಸ್ವಭಾವ ಉದಾಹರಣೆಗೆ ಅನ್ಯಭಾಷಿಕರೊಂದಿಗೆ ನಾವು ಅವರ ಭಾಷೆಯಲ್ಲೇ ಮಾತನಾಡುವ ಪ್ರಯತ್ನ ಮಾಡುತ್ತೇವೆಯೇ ಹೊರತು ಅವರಿಗೆ ಕನ್ನಡ ಕಲಿಸಲು ಕನ್ನಡದಲ್ಲಿ ಮಾತನಾಡೆವು. ಅದೇ ತಮಿಳಿಗರನ್ನು ಗಮನಿಸಿ ಅವರು ತಮಿಳು ಹೊರತು ಬೇರೆ ಭಾಷೆ ಮಾತನಾಡರು. ಬೆಂಗಳೂರು ರೈಲು ನಿಲ್ದಾಣದಲ್ಲಿ ಹೋಗಿನೋಡಿ. ನಮ್ಮ ಆಟೋಚಾಲಕರು ಪ್ರಯಾಣಿಗರಿಗೆ ಅವರವರ ಭಾಷೆಯಲ್ಲೇ ಮಾತನಾಡಿಸುತ್ತಾರೆ. ಅದೇ ಚನ್ನೈನಲ್ಲಿ ನೋಡಿ ಅಲ್ಲಿಯ ಚಾಲಕರು ಯಾವುದೇ ಕಾರಣಕ್ಕೂ ತಮಿಳು ಬಿಟ್ಟು ಬೇರೆ ಮಾತನಾಡರು. ಇದು ನನ್ನ ಸ್ವಂತ ಅನುಭವವೂ ಹೌದು. ಅಷ್ಟೇಕೆ? ಬೆಂಗಳೂರಿನ ಪೂರ್ವಭಾಗದ ಪ್ರದೇಶಗಳಿಗೆ ಹೋದರೆ ಅಲ್ಲಿಯ ಬಡಾವಣೆಗಳ ಹೆಸರೂ ಕಾಕ್ಸ್ ಟೌನ್, ಕುಕ್‌ಟೌನ್ ಹೀಗೆ ಸಾಗುತ್ತಿದೆ. ಅಲ್ಲಿ ಸಂವಾದದ ಭಾಷೆಯೂ ಕನ್ನಡವಲ್ಲ. ಕನ್ನಡ ಶಾಲೆಗಳನ್ನು ಹುಡುಕಬೇಕು. ನಾನು ಕಲಿಸುತ್ತಿದ್ದ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲು ಸಂಸ್ಥೆಯ ಅಧ್ಯಕ್ಷರಾದ ಡಾ॥ ಎಚ್ ನರಸಿಂಹಯ್ಯನವರು ತಮ್ಮೊಂದು ಲೇಖನದಲ್ಲಿ "ಲಾಲ್‌ಬಾಗ್‌ನಲ್ಲಿ ಸಂಚಾರ ಹೊರಟರೆ ನಿಮಗೆ ಒಂದು ಕನ್ನಡದ ನಾಯಿಯೂ ಸಿಗುವುದಿಲ್ಲ. ಎಲ್ಲ ನಾಯಿಗಳೂ ಟಾಮಿ, ಜ್ಯೂಲಿ, ಟೈಗರ್‌ಗಳೇ. ಅವನ್ನೂ ಕನ್ನಡದಲ್ಲಿ ಮಾತನಾಡಿಸುವಂತಿಲ್ಲ. come, sit, run ಎಂದು ಇಂಗ್ಲೀಷ್‌ನಲ್ಲೇ ಮಾತನಾಡಿಸಬೇಕು. ಬಸವನಗುಡಿಯಲ್ಲಿ ಕನ್ನಡದ ಶಾಲೆ ನಡೆಸುವುದೂ ಒಂದೇ ಲಂಡನ್‌ನಲ್ಲಿ ನಡೆಸುವುದೂ ಒಂದೇ" ಎಂದು ಬರೆದಿದ್ದಾರೆ.

**ಪರಿಹಾರ–1 :–** 'ರಾಜಾ ಕಾಲಸ್ಯ ಕಾರಣಂ' ಎಂಬ ಮಾತಿದೆ. ಕರ್ನಾಟಕದ ಯಾವ ಸರ್ಕಾರವೂ ತಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶಿಸಿಲ್ಲ ಎಂದರೆ ತಪ್ಪಾಗದು. ಕಾರಣ ಇಂಗ್ಲೀಷ್ ಶಾಲೆಗಳ ಲಾಬಿಯ ಒತ್ತಡ ಅನೇಕ ರಾಜಕಾರಣಿಗಳೇ ಇಂಗ್ಲೀಷ್ ಶಾಲೆಗಳ ಒಡೆಯರು. ಅಂತಹ ಶಾಲೆಗಳ ಮಟ್ಟದಲ್ಲಿ ಇರುವ ಕನ್ನಡ ಶಾಲೆಗಳನ್ನು ಏಕೆ ನಡೆಸುವುದಿಲ್ಲ! ಕನ್ನಡ ಶಾಲೆಗಳ ಕಟ್ಟಡ, ಪೀಠೋಪಕರಣಗಳು ಅಷ್ಟೇ ದುಸ್ಥಿತಿ ಯಲ್ಲಿರುತ್ತವೆ. ಆದ್ದರಿಂದ ಸರ್ಕಾರವು ಕನ್ನಡದ ಬೆಳವಣಿಗೆಗೆ ಈ ಕೆಳಗಿನ ಕೆಲವೊಂದು ಉಪಕ್ರಮಗಳನ್ನು ತೆಗೆದು ಕೊಳ್ಳಬಹುದೇ?

1. ಕನ್ನಡ ಶಾಲೆಗಳನ್ನು ಅಂದಗೊಳಿಸಿ ಆಕರ್ಷಕವಾಗುವಂತೆ ಮಾಡುವುದು.
2. ಪೀಠೋಪಕರಣಗಳನ್ನು ಒದಗಿಸುವುದು.
3. ಕನ್ನಡಮಾಧ್ಯಮದ ಮಕ್ಕಳಿಗೆ ಶುಲ್ಕ ವಿನಾಯಿತಿ, ಪ್ರೋತ್ಸಾಹ ಧನ ನೀಡುವುದು, ಸರ್ಕಾರೀ ಉದ್ಯೋಗದಲ್ಲಿ ಮೀಸಲಾತಿ ಇತ್ಯಾದಿ.
4. ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ಆಗುವಂತೆ ಕಾನೂನಿನ ಬೆಂಬಲ ನೀಡುವುದು.

ಪುಟ 9 ಕ್ಕೆ ➢

# ರಾಷ್ಟ್ರಕವಿ ಕುವೆಂಪು ಹೇಳಿದ್ದು

**ಕುವೆಂಪು ಅವರು ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದ ಅತ್ಯುಚ್ಚ ಅಧಿಕಾರಿಯಾಗಿ, ವಿದ್ಯಾತಜ್ಞರಾಗಿ ಇಡೀ ಕನ್ನಡನಾಡಿನ ಜನರ ಪ್ರತಿನಿಧಿಯಾಗಿ, ವಿದ್ಯಾರ್ಥಿ ವೃಂದದ ಮಾನಸಿಕ ಬೌದ್ಧಿಕಶಕ್ತಿ ಸಾಮರ್ಥ್ಯಗಳನ್ನರಿಯಬಲ್ಲ ಚಾಣಾಕ್ಷರಾಗಿ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮ ವಾಗಬೇಕೆಂದು ಅಧಿಕಾರ ಸ್ಥಾನದಿಂದ ಪೋಷಿಸಿದ್ದಾರೆ. ಸಭೆಗೋಷ್ಠಿಗಳಲ್ಲಿ ವಾದಿಸಿದ್ದಾರೆ. ಶಿಕ್ಷಣ ತಜ್ಞರ ಆಯೋಗ ನಿಯೋಗಗಳ ಮುಂದೆ ಹೇಳಿಕೆಗಳನ್ನು ನೀಡಿದ್ದಾರೆ. ಅವರ ಈ ನಿಲುವಿಗೆ ಕೇವಲ ಅಂಧ ಭಾಷಾಭಿಮಾನ ಕಾರಣವಲ್ಲ. ದೇಶಕಲ್ಯಾಣಾಕಾಂಕ್ಷಿಯಾದ ಶ್ರೀಸಾಮಾನ್ಯ ಕ್ಷೇಮಕಾತರವಾದ ಕವಿಚೇತನದ ಆಂತರಿಕ ಪ್ರೇರಣೆಯೇ ಕಾರಣ. ಇಂಗ್ಲಿಷ್ ಮರು'ಭೂಮಿಯಲ್ಲಿ ಭಾರತೀಯರ ಬುದ್ಧಿ ಪ್ರತಿಭಾಶಕ್ತಿಗಳು ಇಂಗಿ ಹೋಗುತ್ತಿವೆಯೆಂದು, ಚೀಣೀಯರನ್ನೆ ಮೀರಿ ಇಂಗ್ಲಿಷಿನ ಮಾರಿ ಕಂದರನ್ನು ಹಿಂಡುತ್ತಿದೆಯೆಂದು ಕನ್ನಡದ ಕ್ರಿಸ್ತ ಇಂಗ್ಲಿಷಿನ ಶಿಲುಬೆಯಲ್ಲಿ ಸಿಲುಕಿ ಬಾಯ್ ಬಿಡುತ್ತಿರುವನೆಂದು, ಇಂಗ್ಲಿಷಿನ ಕಲ್ಗಾಣಕ್ಕೆ ಸಿಕ್ಕಿದ್ದ ಕನ್ನಡದ ಚೇತನ ಹಿಪ್ಪೆಯಾಗುತ್ತಿದೆಯೆಂದು, ಇಂಗ್ಲಿಷಿನ ಚಪ್ಪಡಿಯಡಿಯ ಹಸುಳೆ ಚೀತ್ಕಾರಕ್ಕೆ ಕನಿಕರಿಸದ ಮಾನವ, ದಾನವನೆಂದು ತೆಗೆದಿರುವ ಅವರ ಉದ್ಗಾರದಲ್ಲಿ ಅನುಕಂಪೆಯಿದೆ, ಮರುಕವಿದೆ, ಸಂಕಟವಿದೆ, ರೋಷವಿದೆ, ಲೋಕಕಲ್ಯಾಣಾಕಾಂಕ್ಷೆಯಿದೆ. ಇಂಗ್ಲಿಷ್ ಭಾಷೆಯ ಪೂತನಿಯಿಂದ ಭಾರತೀಯ ಮಕ್ಕಳನ್ನು ಸಂರಕ್ಷಿಸುವಂತೆ ಗೋವಿಂದನಿಗೆ ಸಲ್ಲಿಸಿರುವ ಪ್ರಾರ್ಥನೆಯಲ್ಲಿ ಕನ್ನಡನಾಡಿನ ಹಸುಳೆಗಳ ಆರ್ತನಾದ ಪ್ರತಿಧ್ವನಿತವಾಗಿದೆ. ಕುವೆಂಪು ಅವರಿಗೆ ಯಾವ ಭಾಷೆಯ ಮೇಲೆಯೂ ದ್ವೇಷವಿಲ್ಲ, ರೋಷವಿಲ್ಲ 'ಬಲಾತ್ಕಾರಕ್ಕಾಗಿ ಮಾತ್ರವೇ ಹೊರತು ಈ ರೋಷ. ಭಾಷೆಗಾಗಿಯೇ ನಮ್ಮ ದ್ವೇಷವೇನಿಲ್ಲ' ಎಂದು ಹೇಳುತ್ತಾರೆ.**

**ಅನುಗಾಲವೂ ಕುವೆಂಪು ಅವರಿಗಿರುವ ಒಂದೇ ಒಂದು ಚಿಂತೆಯೆಂದರೆ ಕನ್ನಡದ ಚಿಂತೆ. ಯಾವ ವೇದಿಕೆಯಿಂದ ಭಾಷಣ ಮಾಡಿದರೂ ಕನ್ನಡದ ಪ್ರಸ್ತಾಪ ಬಂದೇ ಬರುತ್ತದೆ. ಯಾರು ಅವರನ್ನು ಭೇಟಿ ಮಾಡಿದರೂ ಬೇಸರವಿಲ್ಲದೆ ಶಿಕ್ಷಣ ಮಾಧ್ಯಮದ ಬಗ್ಗೆ ಭಾಷಣ ಮಾಡಿ, ವಾದಮಾಡಿ ಎಂಥಾ ವಿರೋಧಿಯನ್ನಾದರೂ ಪರಿವರ್ತನಗೊಳಿಸಿ, ಬಂದ ಬಂದ'ವರಿಗೆಲ್ಲ ಕನ್ನಡದ ಮಂತ್ರವನ್ನುಪದೇಶಿಸಿ. ಕನ್ನಡದ ದೀಕ್ಷೆಯನ್ನು ಕೊಟ್ಟು ಕಳಿಸುತ್ತಾರೆ. ಕನ್ನಡದ ಬಗ್ಗೆ ಇಷ್ಟು ಚಿಂತೆ ಅಂಟಿಸಿಕೊಂಡ ಬೇರೊಬ್ಬ ವ್ಯಕ್ತಿ ಹಿಂದೆ ಇದ್ದಿರಲಾರರು. ಈಗಂತೂ ಇಲ್ಲ. ಈ ಚಿಂತೆಯು ಹಿಂದೆ ಲೋಕ ಕಲ್ಯಾಣಾಸಕ್ತವಾದ ದೃಷ್ಟಿಯಿದೆಯೆಂಬುದನ್ನು ಯಾರು ಮರೆಯಲಾಗದು. ಕುವೆಂಪುರವರ ಬಗ್ಗೆ ಅಪಾರ ಶ್ರದ್ಧೆಯನ್ನು ತೋರಿಸುವ ನಮ್ಮ ಆಡಳಿತಾ ರೂಢ ರಾಜಕಾರಣಿಗಳಿಗೆ ಅವರ ಮನದಿಚ್ಛೆಯನ್ನು ಪೂರೈಸುವ ಕಾತುರವು ಏಕಿಲ್ಲ?**

# ಕರ್ನಾಟಕ ಏಕೀಕರಣದ ಇತಿಹಾಸ

**(ನಿಘಂಟು ತಜ್ಞ, ಹಿರಿಯ ಸಾಹಿತಿ, ಶತಾಯುಷಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಲೇಖನದ ಆಯ್ದ ಭಾಗವನ್ನೂ, ಹಾರನಹಳ್ಳಿ ರಾಮಸ್ವಾಮಿಯವರ ಏಕೀಕರಣದ ಕುರಿತಾದ ಪುಸ್ತಕದ ಭಾಗವನ್ನೂ ಒಳಗೊಂಡಿದೆ.)**

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



ಭಾರತವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದಾಗಲೇ ದೇಶವನ್ನು ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಿಸುವುದು ಜನತೆಯ ಹಿತದೃಷ್ಟಿಯಿಂದ ಸೂಕ್ತವೆಂದು ಅಂದಿನ ಶ್ರೇಷ್ಠ ಆಡಳಿತಗಾರರು ಅಭಿಪ್ರಾಯಪಟ್ಟಿದ್ದರು. ದಕ್ಷ ಆಡಳಿತಗಾರನೆಂದು ಹೆಸರಾಗಿದ್ದ ಆಗ ಬಳ್ಳಾರಿಜಿಲ್ಲೆಯ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ತನ್ನ ಅಭಿಪ್ರಾಯವನ್ನು ಹೀಗೆ ದಾಖಲಿಸಿದ್ದಾನೆ. "ಮರಾಠರ ಪ್ರಭಾವ ಬೆಳೆಯುವುದಕ್ಕೆ ಆಸ್ಪದ ಕೊಡುವ ಮತ್ತು ಸ್ವಾಭಾವಿಕ ನಂಟು ಇಲ್ಲದ ಮುಂಬಯಿ ಪ್ರಾಂತಕ್ಕೆ ಧಾರವಾಡ ಸೀಮೆಯನ್ನು ಸೇರಿಸುವುದು ಯುಕ್ತವಲ್ಲ. ಕರ್ನಾಟಕದ ಶಾಶ್ವತವಾದ ಏಕೀಕರಣವನ್ನು ಸಾಧಿಸುವುದರಲ್ಲಿ ಒಟ್ಟು ಕನ್ನಡ ಜನರ ಹಿತದೃಷ್ಟಿಯು ಎದ್ದು ಕಾಣುತ್ತದೆ". ಕಂಪನಿ ಸರಕಾರ ಈ ಮಾತನ್ನು ಮನ್ನಿಸಿದ್ದರೆ ಕರ್ನಾಟಕ ಏಕೀಕರಣದ ಚಳುವಳಿಗೆ ಆಸ್ಪದವೇ ಇರುತ್ತಿರಲಿಲ್ಲ. ಆದರೆ ಸರಕಾರದ ಆಡಳಿತದ ವೈಖರಿಯಿಂದ 1862 ರ ವೇಳೆಗೆ ಕರ್ನಾಟಕ ಪ್ರಾಂತ್ಯವು ಒಡೆದು ಚೂರುಚೂರಾಗಿ ಬೇರೆಬೇರೆ ಪ್ರಾಂತ್ಯಗಳ ಆಡಳಿತಕ್ಕೆ ಸೇರಿಹೋಗುವಂತಾಯಿತು. ಇದರಿಂದ ಕನ್ನಡ ಮಕ್ಕಳಿಗೆ ಕನ್ನಡಶಾಲೆಗಳಿಲ್ಲದೆ, ಪಠ್ಯಪುಸ್ತಕಗಳಿಲ್ಲದೆ, ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಯಿತು. ಆಗ ಕನ್ನಡ ಗ್ರಂಥಕರ್ತರ ಸಮ್ಮೇಳನಗಳು ನಡೆದು, ಅದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸಲಾಯಿತು. ಕರ್ನಾಟಕ ವಿದ್ಯಾವರ್ಧಕ ಸಂಘವು ಬೆಳೆದು ಕನ್ನಡದ ಏಕೀಕರಣದತ್ತ ಆಲೋಚನೆಯನ್ನು ಹರಿಸಿತು.

1917 ರಲ್ಲಿ ಆ ಸಂಘದ ವ್ಯವಸ್ಥಾಪಕ ಸಮಿತಿಯಲ್ಲಿ ಒಂದು ಗೊತ್ತುವಳಿಯಾಯಿತು. "ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣೆಯಾಗಿ ಸೊಲ್ಲಾಪುರದ ಕೆಲವು ಭಾಗಗಳಲ್ಲಿ ಕನ್ನಡ ವಿರುತ್ತದೆ. ಮದರಾಸು ಇಲಾಖೆಯಲ್ಲಿ, ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪೂರ್ಣ ಕನ್ನಡವಿದ್ದು, ಕಡಪ, ಕರ್ನೂಲು, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಕನ್ನಡ ಇರುತ್ತದೆ. ಇವುಗಳನ್ನೆಲ್ಲ ಒಟ್ಟುಗೂಡಿಸಿದರೆ ಅದು ಕನ್ನಡಿಗರ ಐಕ್ಯಕ್ಕೂ, ಹಿತಕ್ಕೂ, ಬೆಳವಣಿಗೆಗೂ ಅನುಕೂಲವಾಗುವುದು".

(ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ಐವತ್ತು ವರುಷ, 1941, ಪುಟ 25) ಏಕೀಕರಣದ ವಿಚಾರವು ಕನ್ನಡ ಜನತೆಯ ತಲೆಗೆ ಹೊಕ್ಕಿತ್ತೆಂಬುದಕ್ಕೆ ಇದೇ ಮೊದಲನೆಯ ದಾಖಲೆ. ಅಧಿಕೃತವಾಗಿ ಸಂಸ್ಥೆಯೊಂದು ಮಾಡಿದ್ದ ದಾಖಲೆ. ಇಲ್ಲಿಂದ ಹಿಡಿದು ಈ ಅಭಿಪ್ರಾಯವು ದೃಢವಾಗಿ ಬೆಳೆದು ಸ್ಪಷ್ಟ ಫಲಿತಾಂಶವನ್ನು ಕಂಡದ್ದು 1956 ರಲ್ಲಿ. 1956 ರ ನವೆಂಬರ್ ಒಂದರಂದು ವಿಶಾಲ ಮೈಸೂರು ರಾಜ್ಯ ನಿರ್ಮಾಣವಾಯಿತು. 40 ವರ್ಷಗಳ ನಂತರ 1972 ರಲ್ಲಿ ಈ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರನ್ನು ನೀಡಬೇಕೆಂದು ವಿಧಾನಪರಿಷತ್ತಿನಲ್ಲಿ ಸರ್ವಾನುಮತದಿಂದ ಸ್ವೀಕೃತವಾಯಿತು. 1.11.1973 ರಂದು ರಾಜ್ಯ ಅಧಿಕೃತವಾಗಿ ಕರ್ನಾಟಕವಾಯಿತು.

ಏಕೀಕರಣದ ಹೋರಾಟ ಇತಿಹಾಸದಲ್ಲಿ ದಾಖಲೆಯಾಗಿರುವ ಕನ್ನಡಿಗರೆಲ್ಲರೂ ಸದಾ ನೆನಪಿಡಲೇಬೇಕಾದ ಘಟನೆಗಳ, ನಾಡುನುಡಿಯ ಗೌರವವನ್ನು ಕಾಯ್ದುಕೊಂಡ ಮಾತೃಭೂಮಿಯ ಅಭಿಮಾನಿಗಳ ಹೋರಾಟದ ವಿವರಗಳನ್ನು ಹೊಂದಿರುವ ಭಾಗವೆನಿಸಿಕೊಂಡಿದೆ. ಅದರ ಕಥೆ ಹೀಗಿದೆ. ಸ್ವಾತಂತ್ರ್ಯ ಬಂದು ಮೈಸೂರು ರಾಜ್ಯದಲ್ಲಿ ಚುನಾಯಿತ ಸರ್ಕಾರದ ಸ್ಥಾಪನೆಯಾಗಿತ್ತು. ಚೆಂಗಲರಾಯರೆಡ್ಡಿ ಪ್ರಥಮ ಮುಖ್ಯಮಂತ್ರಿ, ಕನ್ನಡ ನಾಡಿನ ಜನ ಮೈಸೂರು, ಮದರಾಸು, ಮುಂಬೈ, ಕೊಡಗು, ಹೈದರಾಬಾದ್ ಮಹಾರಾಷ್ಟ್ರ ಹೀಗೆ ನಾನಾಕಡೆಗಳಲ್ಲಿ ಹಂಚಿಹೋಗಿದ್ದರು. ಎಲ್ಲರೂ ಒಂದಾಗಬೇಕಾದುದು ನಾಡಿನ ಭದ್ರತೆಯ ದೃಷ್ಟಿಯಿಂದ ಅನಿವಾರ್ಯವಾಗಿತ್ತು. ಆದರೆ ದೇಶೀಯ ಸಂಸ್ಥಾನಗಳು ವಿಲೀನವಾಗಿಲ್ಲದಿದ್ದುದು ಈ ಭಾಷಾವಾರು ಪ್ರಾಂತ್ಯರಚನೆಗೆ ತೊಡಕಾಗಿತ್ತು.

1948 ರಲ್ಲಿ ಜಯಪುರ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಅಧ್ಯಕ್ಷ ಡಾ. ಪಟ್ಟಾಭಿಸೀತಾರಾಮಯ್ಯ ಸೇರಿದಂತೆ ಜವಹರಲಾಲ್ ನೆಹರು, ವಲ್ಲಭಭಾಯಿ ಪಟೇಲ್ ಸಮಿತಿ ವರದಿ ನೀಡಿತ್ತು. ಅದೇ ಜೆ.ಪಿ.ವಿ.ವರದಿ. ಅದರ ಪ್ರಕಾರ ಆಂಧ್ರ ಪ್ರಾಂತ್ಯ ರಚನೆಗೆ ಒಪ್ಪಿಗೆ ಇತ್ತು. ಆದರೆ ಕರ್ನಾಟಕ, ಕೇರಳ ಪ್ರಾಂತ್ಯ ರಚನೆಗೆ ದೇಶೀಯ ಸಂಸ್ಥಾನಗಳ ವಿಲೀನ ಅಗತ್ಯವಿದ್ದುದರಿಂದ ಅದನ್ನು ಮುಂದೆ ಹಾಕಿದ್ದರು. ಈ ತೀರ್ಮಾನಕ್ಕೆ ಪ್ರತಿಭಟನೆಯಾಗಿ ಹಾರನಹಳ್ಳಿ ರಾಮಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ. ಎಂ. ರುದ್ರಪ್ಪ, ಎಚ್. ಎಸ್. ದೊರೆಸ್ವಾಮಿ ಮುಂತಾದವರ ಯೋಚನೆಯ ಫಲವಾಗಿ ಕರ್ನಾಟಕ ಯುವಕ ಪರಿಷತ್ ಸ್ಥಾಪನೆಯಾಯಿತು. ದಾವಣಗೆರೆಯಲ್ಲಿ 1949 ಜುಲೈ 27–28 ರಂದು ಬೃಹತ್ ಅಧಿವೇಶನ ನಡೆಯಿತು. ಇಡೀ ಕರ್ನಾಟಕದ ಯುವಕರ ಪಡೆ ಸಿದ್ಧಮಾಡುವುದು ಮುಖ್ಯ ಉದ್ದೇಶವಾಗಿತ್ತು. ಸುಭಾಷ್ ಚಂದ್ರ ಬೋಸರ ಅಣ್ಣ ಶರತ್ಚಂದ್ರ ಬೋಸರಿಗೆ ಸನ್ಮಾನವಲ್ಲದೆ, ಕೆ.ಪಿ.ಸಿ.ಸಿ. ಅಧ್ಯಕ್ಷ ನಿಜಲಿಂಗಪ್ಪ, ಸಿ. ಸುಬ್ರಹ್ಮಣ್ಯಂ. ಕೆ. ಆರ್. ಕಾರಂತ, ಗುಡ್ಲೆಪ್ಪ ಹಳ್ಳಿಕೇರಿ, ಖಾದ್ರಿ ಶಾಮಣ್ಣ. ಎಚ್. ಎಸ್. ದೊರೆಸ್ವಾಮಿ, ಪಾಟೀಲ ಪುಟ್ಟಪ್ಪ, ಬಿ. ಎನ್. ದಾತಾರ ಮುಂತಾದ ಹಲವಾರು ನಾಯಕರ ಸಮಾವೇಶ ನಡೆದಿತ್ತು. ಅದರ ಮುಂದಿನ ಅಧಿವೇಶನ ಕಡೂರು

ಪುಟ 10 ಕ್ಕೆ ➤

# ದೀಪಾವಳಿ–ಹಿನ್ನಲೆ ಮತ್ತು ಮಹತ್ವ

**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ**
**ಕಾಲೇಜು, ಜಯನಗರ 3ನೇ ಬ್ಲಾಕ್,**
**ಬೆಂಗಳೂರು**



**"ದೀಪಂ ಜ್ಯೋತಿ ಪರಂಬ್ರಹ್ಮ ದೀಪಂ ಸರ್ವ ತಮೋಪಹಂ**
**ದೀಪೇನ ಸಾಧ್ಯತೆ ಸರ್ವಂ ಮಮ ಶತ್ರು ವಿನಾಶಾಯ**
**ಶುಭ್ರಂ ಭವತು ಕಲ್ಯಾಣ ಆರೋಗ್ಯ ಧನ ಸಂಪದಂ**
**ಶತ್ರು ಬುದ್ಧಿ ವಿನಾಶಾಯ ದೀಪಲಕ್ಷ್ಮೀ ನಮೋಸ್ತುತೇ"**

ದೀಪಾವಳಿ ಬೆಳಕಿನ ಹಬ್ಬ. ಭಾರತೀಯ ಸನಾತನ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ದೀಪ ಮತ್ತು ಅದು ಹೊರಸೂಸುವ ಬೆಳಕಿಗೆ ವಿಶೇಷ ಮಾನ್ಯತೆಯಿದೆ.

ಅಸತೋಮ ಸದ್ಗಮಯ ತಮಸೋಮಾ ಜ್ಯೋತಿರ್ಗಮಯ ಎಂಬ ಮಹೋನ್ನತ ಸಾಲುಗಳು ಅಸತ್ಯದಿಂದ ಸತ್ಯದೆಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ ಎಂಬುದನ್ನು ಸಾರುತ್ತವೆ. ಮಾನವನು ತನ್ನ ಬದುಕಿನಲ್ಲಿ ಅಂಧಕಾರವ ತೊಡೆದು ತನ್ನೆಲ್ಲ ಇತಿಮಿತಿಗಳನ್ನು ಸೀಮೋಲ್ಲಂಘನೆ ಮಾಡಿ ಬದುಕನ್ನು ಬೆಳಗಿಸಿಕೊಂಡು ಸಾರ್ಥಕ ಪಡಿಸಿಕೊಳ್ಳಬೇಕು ಎಂಬುದು ಭಾರತದ ಪವಿತ್ರ ಮಣ್ಣಿನ ಆಶಯ ಎಂದರೆ ಅತಿಶಯೋಕ್ತಿಯಾಗಲಾರದು.

ಹಣತೆ ಬೆಳಗಿದರೆ ಅದು ಕತ್ತಲೆಯನ್ನು ಹೊಡದೋಡಿಸಿ ಬೆಳಕನ್ನು ಪಸರಿಸುತ್ತದೆ. ದೀಪ ಊರ್ಧ್ವಗಾಮಿಯಾಗಿರುತ್ತದೆ. ಹಾಗೆಯೇ ಮನುಷ್ಯ ತನ್ನ ಪವಿತ್ರ ಜೀವಿತ ಕಾಲದಲ್ಲಿ ದಿನೇ ದಿನೇ ಎತ್ತರಕ್ಕೆ ಬೆಳೆಯಬೇಕಾಗುತ್ತದೆ ಹಾಗೂ ತನ್ನ ನೆರೆಹೊರೆಯ ಸಮಾಜವನ್ನು ಸಹ ಬೆಳಗಬೇಕಾಗಿದೆ. ಪ್ರಸಕ್ತ ನಮ್ಮ ದಿನನಿತ್ಯ ಜೀವನದಲ್ಲಿ ಹಣತೆ ಸಾಮಾನ್ಯವೆನಿಸಿದರೂ ಅದರ ಸಂದೇಶ ಅಸಮಾನ್ಯವಾಗಿದೆ. ಭಾರತೀಯ ದರ್ಶನದಲ್ಲಿ ದೀಪವನ್ನು ನೋಡುವ ಅಥವಾ ಅದನ್ನೂ ದರ್ಶಿಸುವ ಪರಿ ವಿಶೇಷವಾದದ್ದು. ಭಾರತದಂತಹ ಪುಣ್ಯಭೂಮಿಯಲ್ಲಿರುವ ಪ್ರತಿಯೊಬ್ಬರು 'ದೀಪ' ಆರಾಧಿಸಬೇಕು ಆ ಮೂಲಕ ಇಡೀ ವಿಶ್ವವನ್ನು ಬೆಳಗಬೇಕು. ಆದಕಾರಣ ಭಾರತವನ್ನು 'ವಿಶ್ವಗುರು' ಎಂದು ಪರಿಭಾವಿಸಿರುವುದು. ಜ್ಞಾನದ ಬೆಳಕನ್ನು ಇಡೀ ವಿಶ್ವಕ್ಕೆ ನೀಡುವ ಏಕೈಕ ದೇವಭೂಮಿಯೆಂದರೆ ಅದು ನನ್ನ ಭಾರತ, ಹೆಮ್ಮೆಯ ಭಾರತ, 'ಜಗದ್ಗುರು ಭಾರತ'. ಆದುದರಿಂದ ಭಾರತೀಯರಾದ ನಾವು ಗರ್ವದಿಂದ ಬಾಳಬೇಕು. ಜಗತ್ತಿಗೆ ಬೆಳಕನ್ನು ನೀಡಿದವರು ನಾವು ಎಂಬುದನ್ನು ಅವಿಚ್ಛಿನ್ನವಾಗಿ ಮನನ ಮಾಡಿಕೊಳ್ಳಬೇಕು. ಇಂತಹ ಸಂತಸ ಸಂಭ್ರಮಾಚರಣೆಯೇ ದಿನ ನಿತ್ಯದ ದೀಪಾವಳಿಯಾಗಬೇಕು.

ದೀಪ ಹೇಗೆ ತನ್ನನ್ನು ತಾನು ದಹಿಸಿಕೊಂಡು ಜಗತ್ತಿಗೆ ಬೆಳಕು ನೀಡುತ್ತದೆಯೋ ಹಾಗೇ ನಾವು ಕೂಡ ನಮ್ಮ ಬದುಕಿನಲ್ಲಿ ತ್ಯಾಗ ಪರಿಪಾಲನೆ ಮಾಡಿ ಆ ಮೂಲಕ ಇಡೀ ಜಗತ್ತನ್ನು ಬೆಳಗಬೇಕು. ಗೌತಮ ಬುದ್ಧ, ಮಹಾವೀರ, ಆದಿಶಂಕರ, ಸ್ವಾಮಿ ವಿವೇಕಾನಂದರು ತಮ್ಮ ಬದುಕಿನ ಮೂಲಕ ಇಡೀ ವಿಶ್ವಕ್ಕೆ ಬೆಳಕಾದವರು.

ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಯೊಂದು ಹಬ್ಬವು ಋತುಗಳೊಂದಿಗೆ ವಿಶೇಷ ಸಂಬಂಧ ಹೊಂದಿದೆ. ಋತುಮಾನ ದಲ್ಲಿರುವ ಬದಲಾವಣೆಯನ್ನು ಸಂಭ್ರಮಿಸುವ ದ್ಯೋತಕವಾಗಿ ಹಬ್ಬಗಳ ಆಚರಣೆ ಕಂಡುಬರುತ್ತದೆ. ಆದ್ದರಿಂದ ಎಲ್ಲಾ ಭಾರತೀಯ ಹಬ್ಬಗಳ ಋತೋತ್ಸವಗಳಾಗಿವೆ. ಹಿಂದೂ ಪಂಚಾಂಗದ ಪ್ರಕಾರ ದೀಪಾವಳಿ ಕಾರ್ತಿಕ ಮಾಸದಲ್ಲಿ ಬರುತ್ತದೆ. ಪ್ರಾಕೃತಿಕವಾಗಿ ಈ ಮಾಸದಲ್ಲಿ ಸೂರ್ಯಾಸ್ತ ಬೇಗನೆ ಆಗುತ್ತದೆ. ಕತ್ತಲೆ ಕವಿಯುತ್ತದೆ. ಆದಕಾರಣ ಸಾಲು ಸಾಲು ದೀಪಗಳನ್ನು ಬೆಳಗಿಸಿ ಕತ್ತಲೆಯನ್ನು ಸರಿಸುವ ಹಬ್ಬವೇ ದೀಪಾವಳಿಯಾಗಿದೆ. ಇಂತಹ ಹಬ್ಬದ ಹಿನ್ನಲೆ ಇಂದು ನಿನ್ನೆಯದಲ್ಲ. ಅದು ವೇದಕಾಲದ ಇತಿಹಾಸದೊಂದಿಗೆ ಪ್ರಾರಂಭವಾಗುತ್ತದೆ. ಅಖಂಡ ಹಿಂದೂ ರಾಷ್ಟ್ರದ ಪ್ರಾಚೀನ ಹಬ್ಬಗಳಲ್ಲಿ ದೀಪಾವಳಿಯು ಒಂದು.

ಅಖಂಡ ಹಿಂದೂರಾಷ್ಟ್ರದ ಭೂಭಾಗಗಳಾದ ಆಫ್ಘಾನಿಸ್ಥಾನ, ಬರ್ಮಾ, ಶ್ರೀಲಂಕಾ, ಮಯನ್ಮಾರ್, ಕಾಂಬೋಡಿಯ ಹಾಗೂ ವಿಯಟ್ನಾಂಗಳಲ್ಲಿ ಇಂದಿಗೂ ದೀಪಾವಳಿಯ ಆಚರಣೆಯನ್ನು ಗಮನಿಸಬಹುದು. ಪ್ರಾಚೀನ ಕಾಲದಿಂದಲೂ ಭಾರತದ ಮೇಲೆ ನಿರಂತರವಾಗಿ ದಾಳಿ ಮಾಡಿದ ಆಕ್ರಮಣಕಾರರು ದೇಶದ ಭೂಭಾಗವನ್ನು ಒಡೆದು ತುಂಡು ತುಂಡಾಗಿ ಮಾಡಿದರೆ ಹೊರತು ಭಾರತದ ಸಾಂಸ್ಕೃತಿಕ ಗಟ್ಟಿತನವನ್ನಲ್ಲ ಎಂಬುದನ್ನು 'ದೀಪಾವಳಿ' ಜಗಜ್ಜಾಹೀರುಗೊಳಿಸಿದೆ. ಸನಾತನದಿಂದಲೂ ಹಿಂದು, ಬೌದ್ಧ, ಜೈನ ಮತ್ತು ಸಿಖ್ ಅನುಯಾಯಿಗಳು ದೀಪಾವಳಿಯನ್ನು ಆಚರಿಸುತ್ತ ಬರುತ್ತಿದ್ದಾರೆ.

ಇದೇ ಈ ನೆಲದ ಧಾರ್ಮಿಕ ಮತ್ತು ಸಂಸ್ಕೃತಿಯ ಗಟ್ಟಿತನ. ಮತಗಳು ಬೇರೆ ಇರಬಹುದು, ಆದರೆ ಹಬ್ಬ ಮಾತ್ರ ಒಂದೇ. ಈ ಎಲ್ಲ ಮತಗಳ ಅನುಯಾಯಿಗಳಲ್ಲಿ ಹಬ್ಬದ ಸಂಭ್ರಮಕ್ಕೆ, ಆಚರಣೆಗೆ ಸಂಘರ್ಷವಿಲ್ಲ ಇದೇ ಈ ಮಣ್ಣಿನ 'ಜೀವಂತಿಕೆ' ಇದೇ ಈ ಮಣ್ಣಿನ ಸಹಿಷ್ಣುತೆ. ದೀಪಾವಳಿಯ ಐತಿಹ್ಯ ಎಲ್ಲ ಧರ್ಮದ ಸಂಗತಿಗಳೊಂದಿಗೆ ಬೆರೆತುಹೋಗಿದೆ. ದೀಪಾವಳಿಗೆ ತನ್ನದೇ ಆದ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನಲೆ ಇದೆ.

ಹಿಂದೂ ಪುರಾಣದ ಪ್ರಕಾರ ಶ್ರೀರಾಮಚಂದ್ರ ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ, ಸೀತಾಪಹರಣಕ್ಕೆ ಕಾರಣನಾದ ರಾವಣನನ್ನು ವಧಿಸಿ, ಸೀತೆ ಮತ್ತು ಲಕ್ಷ್ಮಣನೊಂದಿಗೆ ಅಯೋಧ್ಯೆಗೆ ಮರಳಿದ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾದ ಹಬ್ಬವೇ ದೀಪಾವಳಿ. 'ಅಧರ್ಮದ ವಿರುದ್ಧ ಧರ್ಮದ ಜಯ– ಕೆಟ್ಟತನವನ್ನು ಅಳಿಸಿ ಒಳ್ಳೆಯತನವನ್ನು ಪುನರ್‌ಪ್ರತಿಷ್ಠಾಪಿಸಿದ ದಿನವೆಂದು ತಿಳಿಯಲಾಗಿದೆ. ಇದನ್ನು ಸಾಂಕೇತಿಕವಾಗಿ ಆಚರಿಸುವ ಹಬ್ಬವೇ ದೀಪಾವಳಿಯಾಗಿದೆ.

ಶ್ರೀಕೃಷ್ಣನ ಜೀವಿತದ ಎರಡು ಪ್ರಮುಖ ಸಂಗತಿಗಳು ದೀಪಾವಳಿಯೊಂದಿಗೆ ತಳಕು ಹಾಕಿಕೊಂಡಿದೆ. ದೀಪಾವಳಿಯಂದು ಶ್ರೀಕೃಷ್ಣ ನರಕಾಸುರನನ್ನು ವಧಿಸಿ ಆತನ ಬಂಧನದಲ್ಲಿದ್ದ ಮುಗ್ಧ ಜನರನ್ನು ಹಾಗೂ ಸಾವಿರಾರು ಕನ್ಯೆಯರನ್ನು ಬಂಧಮುಕ್ತಗೊಳಿಸಿದ

**ಪುಟ 9 ಕ್ಕೆ ➤**

# ವಿದ್ಯಾರ್ಥಿ ಬಾಳಲ್ಲಿ ಸಮಯವೇ ಸಂಪತ್ತು

ಮಾನವನ ಜೀವನವೇ ಒಂದು ಸಂಘರ್ಷ, ಸಮಸ್ಯೆ, ಹೊಂದಾಣಿಕೆಯ ಮೊತ್ತ. ಸಂಸಾರವೆಂಬ ಸಾಗರದಲ್ಲಿ ಅನೇಕ ಕಷ್ಟ–ನಷ್ಟ, ನೋವು– ನಲಿವುಗಳು ಬಂದೊದಗುತ್ತವೆ. ಇವುಗಳ ಮಧ್ಯೆಯೇ ಜೀವನ ಅರಳಿಸಿಕೊಂಡು ಬೆಳೆಯಬೇಕಾಗುತ್ತದೆ ಹಾಗೂ ಜಗತ್ತಿನ ಬೆಳಕಾಗಬೇಕಾಗುತ್ತದೆ. ಬಾಲ್ಯದಲ್ಲಿ ವಿದ್ಯೆ, ಯೌವನದಲ್ಲಿ ಕಾಯಕ, ಮುಪ್ಪಿನಲ್ಲಿ ಆನಂದ ಈ ಮೂರು ಮಾನವನ ಜೀವನದ ಪ್ರಮುಖ ಹಂತ ಅಥವಾ ಏಣಿ ಅಂತ ಹೇಳಬಹುದು. ಏಕೆಂದರೆ ಬಾಲ್ಯದಲ್ಲಿ ವಿದ್ಯೆ ಗಳಿಸಿದಾಗ ಯೌವನದಲ್ಲಿ ಕಾಯಕ ಸರಳವಾಗುತ್ತದೆ. ಈ ಎರಡರಿಂದ ಮುಪ್ಪಿನ ಜೀವನ ಆನಂದಮಯವಾಗಿರುತ್ತದೆ. ಆದ್ದರಿಂದ ಮಾನವನು ತನ್ನ ಕರ್ತವ್ಯವನ್ನು ಆಯಾ ಸಮಯ ಸಂದರ್ಭಕ್ಕನುಸಾರವಾಗಿ ನಿರ್ವಹಿಸಿದರೆ ಜೀವನದಲ್ಲಿ ಯಶಸ್ಸು ಖಂಡಿತವಾಗಿ ಸಾಕಾರವಾಗುತ್ತದೆ. ಅದಕ್ಕಾಗಿ ಮಾನವನ ಜೀವನದಲ್ಲಿ ಸಮಯ ಅತ್ಯಮೂಲ್ಯವಾದುದೆಂದು "ದಾರಿಯೋಪೋ' ಎಂಬ ಚಿಂತಕರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ. "ನಿಮಗೆ ದೊರೆತಿರುವ ಸಮಯವನ್ನು ಹೇಗೆ ಸದುಪಯೋಗಪಡಿಸಿಕೊಂಡು ಜೀವಿಸಬೇಕೆಂದು ಅರಿತುಕೊಳ್ಳಿ ಯಶಸ್ಸು ಖಂಡಿತ ಸಿಗುತ್ತದೆ. ಒಂದು ವೇಳೆ ಆಲಸ್ಯತನದಿಂದ ಕಾಲಹರಣ ಮಾಡಿದರೆ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಜೀವನವೆಂಬುದು ಹೂವಿನ ಹಾಸಿಗೆಯಾಗದೆ ಮುಳ್ಳಿನ ಹಾಸಿಗೆಯಾಗಿ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ".

ಇಂದು ಆಯಾಸವೆಂದು ಕುಳಿತುಕೊಂಡರೆ ನಾಳಿನ ಆನಂದ ಕಳೆದುಕೊಳ್ಳಬೇಕಾಗುತ್ತದೆ. ಬಹುತೇಕ ದೊಡ್ಡವರಾಗಲಿ, ವಿದ್ಯಾರ್ಥಿಗಳಾಗಲಿ ತಾವು ಮಾಡುವ ಕೆಲಸ ನಾಳೆ ಮಾಡಿದರಾಯಿತು, ನಾಡಿದ್ದು ಮಾಡಿದರಾಯಿತು, ಇನ್ನೂ ಬಹಳಷ್ಟು ಸಮಯವಿದೆ ಎಂದು ಆಲಸ್ಯತನದಿಂದ ದಿನವನ್ನು ಮುಂದೆ ತಳ್ಳುತ್ತಾರೆ. ವಿದ್ಯಾರ್ಥಿಯೊಬ್ಬನನ್ನೇ ತೆಗೆದುಕೊಳ್ಳಿ. ಏಪ್ರಿಲ್ ತಿಂಗಳ ವಾರ್ಷಿಕ ಪರೀಕ್ಷೆಯಲ್ಲಿ ತಾನೋದುತ್ತಿರುವ ತರಗತಿಯಲ್ಲಿ ಕಡಿಮೆ ಅಂಕ ಬಂದುದಕ್ಕಾಗಿ ಅಪ್ಪ ಅಮ್ಮಂದಿರಿಗೆ ಸಮಾಧಾನ ನೀಡುತ್ತಾ ಹೇಳುತ್ತಾನೆ, 'ಈ ವರ್ಷ ಜೂನ್ ತಿಂಗಳ ಪ್ರಾರಂಭದಿಂದಲೇ ಚೆನ್ನಾಗಿ ಓದಿ ಹೆಚ್ಚಿನ ಅಂಕ ಗಳಿಸುತ್ತೇನೆಂದು' ಭರವಸೆ ನೀಡುತ್ತಾನೆ ಮತ್ತು ಹಾಗೆ ಅಂದುಕೊಳ್ಳುತ್ತಾನೆ. ಆದರೆ ಜೂನ್ ತಿಂಗಳು ಬಂದು ಶಾಲೆ ಪ್ರಾರಂಭವಾದ ಮೇಲೆ ಶಿಕ್ಷಕರು ಪಾಠ ಮಾಡಿದ ಮೇಲೆ ಓದಿದರಾಯಿತು ಅಂದುಕೊಳ್ಳುತ್ತಾನೆ. ಮೇಷ್ಟ್ರು ಪಾಠ ಪ್ರಾರಂಭ ಮಾಡಿದ ಮೇಲೆ ಇನ್ನೂ ಓದುವುದಕ್ಕೆ ಬಹಳಷ್ಟು ಸಮಯವಿದೆ ಅಕ್ಟೋಬರ್ ರಜೆ ಮುಗಿದ ತಕ್ಷಣ ಓದಿದರಾಯಿತು ಎಂದು ಹೀಗೆ, ಹಾಗೆ ಎನ್ನುವುದರೊಳಗೆ ವಾರ್ಷಿಕ ಪರೀಕ್ಷೆ ಹತ್ತಿರ ಬಂದೇ ಬಿಡುತ್ತದೆ. ಓದದೆ ಇರುವುದರಿಂದ ಒತ್ತಡ ಹೆಚ್ಚಾಗುತ್ತದೆ. ಅಲ್ಪ ಸ್ವಲ್ಪ ಓದಿದ್ದು ನೆನಪು ಹೋಗುತ್ತದೆ. ಪರೀಕ್ಷೆಯಲ್ಲಿ ಒಳ್ಳೆಯ ರೀತಿ ಬರೆಯಲಾಗದೆ ಪರಿತಪಿಸಬೇಕಾಗುತ್ತದೆ. ಕಾರಣ ತನಗೆ ಸಿಕ್ಕ ಸಮಯ ಸದುಪಯೋಗ ಪಡಿಸಿಕೊಳ್ಳದೆ ಸಮಯ ಮುಂದೂಡಿ ಮೂರ್ಖನಾಗಿದ್ದು ಇದಕ್ಕೆ ಈ ಕೆಳಗಿನ ವಿದ್ಯಾರ್ಥಿಗಳ ದೃಷ್ಟಾಂತವೆ ಉದಾಹರಣೆ.

ಒಂದು ತರಗತಿಯಲ್ಲಿ ಇಬ್ಬರು ವಿದ್ಯಾರ್ಥಿಗಳಿರುತ್ತಾರೆ. ಒಬ್ಬ ಜಾಣ, ಇನ್ನೊಬ್ಬ ದಡ್ಡ. ಜಾಣ ವಿದ್ಯಾರ್ಥಿ ನನಗೆ ಎಲ್ಲಾ ಬರುತ್ತದೆ ಎಂಬ ಅಹಂಕಾರದಿಂದ ಕೂಡಿದ್ದು, ಶಿಸ್ತು ಸಮಯ ಪರಿಪಾಲಕನಾಗಿರದೆ



**ಶ್ರೀಮತಿ ಜಯದೇವಿ ಆರ್. ಯದಲಾಪೂರೆ,**
ಪ್ರಾಚಾರ್ಯರು, ದತ್ತಗಿರಿ ಮಹಾರಾಜ್ ಪ್ರೌಢಶಾಲೆ, ಬೀದರ್

ಬೇಜವಾಬ್ದಾರಿಯಾಗುತ್ತಾನೆ. ಒಂದು ವರ್ಷದ ಓದು ಒಂದು ತಿಂಗಳಲ್ಲಿ ಓದಿ ಮುಗುಸುತ್ತೇನೆಂಬ ವಿಶ್ವಾಸದೊಂದಿಗೆ ಕಾಲಹರಣ ಮಾಡುತ್ತಾನೆ. ಆದರೆ ದಡ್ಡ ವಿದ್ಯಾರ್ಥಿ ನಯ, ವಿನಯ, ಶಿಸ್ತು, ಬದ್ಧತೆಯಿಂದ ಕಲಿಯಬೇಕೆಂಬ ಹಂಬಲ ಹೊಂದಿ ಸಮಯ ಪರಿಪಾಲಕನಾಗಿದ್ದ. ಎಷ್ಟೇ ಓದಿದ್ದರೂ ತಲೆಗೆ ಹತ್ತದಿದ್ದರೂ ಗುರುಗಳ ಮಾರ್ಗದರ್ಶನದಂತೆ ಹಗಲಿರುಳು ಕುಳಿತು ಓದುವುದಕ್ಕೆ ಪ್ರಯತ್ನಿಸುತ್ತಿದ್ದ. ಹತ್ತನೇ ತರಗತಿಯ ಪರೀಕ್ಷೆ ಸಮೀಪಿಸಿತು. ಜಾಣ ವಿದ್ಯಾರ್ಥಿಗೆ ಜ್ವರ ಕಾಣಿಸಿಕೊಂಡವು. ಇದರಿಂದ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದ ಅವನು ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡನು. ಆದರೆ ದಡ್ಡ ವಿದ್ಯಾರ್ಥಿ ಇಡೀ ವರ್ಷ ಸತತ ಪ್ರಯತ್ನಪಟ್ಟು ಅಭ್ಯಾಸ ಮಾಡಿ ಪಾಸಾಗಿದ್ದನು. ಈ ಫಲಿತಾಂಶ ಅವನಿಗೆ ಜೀವನದಲ್ಲಿ ಹೊಸ ಚೈತನ್ಯ ಮೂಡಿ, ನವಜೀವನ ತಂದುಕೊಟ್ಟಿತು. ಇದೇ ರೀತಿ ಮುಂದುವರಿದು ಒಂದು ಕನಸು ಕಟ್ಟಿಕೊಂಡು ಸತತ ಪ್ರಯತ್ನಪಟ್ಟು ಓದಿ ಅಧಿಕಾರಿಯಾಗಿ ಸುಖಮಯ ಜೀವನ ಸಾಗಿಸಿದ.

ಆದರೆ ಜಾಣ ವಿದ್ಯಾರ್ಥಿ ತನ್ನ ಆಲಸ್ಯತನದಿಂದ ಅನುತ್ತೀರ್ಣನಾಗಿ ನಿರುತ್ಸಾಹಗೊಂಡು ಶಾಲೆ ಬಿಟ್ಟು ಓದು ಅಲ್ಲಿಗೆ ಮೊಟಕುಗೊಳಿಸಿ ನಿರುದ್ಯೋಗಿಯಾದನು. ಇಬ್ಬರು ಒಮ್ಮೆ ಪರಸ್ಪರ ಭೇಟಿಯಾದರು. ಆಗ ಜಾಣ ವಿದ್ಯಾರ್ಥಿ ದೇವರು ನಿನ್ನ ಹಣೆಯ ಬರಹ ಎಷ್ಟು ಚೆನ್ನಾಗಿ ಬರೆದಿದ್ದಾನೆ. ನನ್ನ ಹಣೆಬರಹ ನೋಡು ಅಂತ ಹೇಳುತ್ತಾನೆ. ಆಗ ದಡ್ಡ ವಿದ್ಯಾರ್ಥಿ ಹೇಳುತ್ತಾನೆ, ನಿನ್ನ ಹಣೆ ಬರಹ ದೇವರು ಬರೆಯಲಿಲ್ಲ, ನೀನೇ ಬರೆದುಕೊಂಡಿದ್ದಿಯಾ, ಆ ದೇವರು ನಿನ್ನನ್ನು ಜಾಣನಾಗಿಯೇ ಹುಟ್ಟಿಸಿದ್ದಾನೆ. ಆದರೆ ನೀನು ಸಮಯ ಪರಿಪಾಲನೆ ಮಾಡದೆ ಆರಾಮ ಹಾಗೂ ಅಹಂಕಾರದಿಂದ ನಿರ್ಲಕ್ಷ್ಯದಿಂದ ಹಾಳು ಮಾಡಿಕೊಂಡೆ. ಆದರೆ ನನ್ನ ತಲೆಗೆ ಮೇಷ್ಟ್ರು ಹೇಳಿದ ಒಂದಕ್ಷರವೂ ಹತ್ತದಿದ್ದರೂ ಗುರುಗಳ ಮಾರ್ಗದರ್ಶನದಂತೆ ಹಗಲು ರಾತ್ರಿಯೆನ್ನದೆ ಸತತ ಪ್ರಯತ್ನಿಸಿದೆ. ಅದರ ಪ್ರತಿಫಲ ದೊರೆತಿದೆ.

ಈ ಮಾತನ್ನು ಕೇಳಿದ ಜಾಣ ವಿದ್ಯಾರ್ಥಿಯ ಕಣ್ಣು ತೆರೆಯಿತು. ಆದರೆ ಸಮಯ ಮೀರಿ ಹೋಗಿತ್ತು. ಈ ಇಬ್ಬರು ವಿದ್ಯಾರ್ಥಿಗಳನ್ನು ನೋಡಿದರೆ " ಆಮೆ ಮತ್ತು ಮೊಲದ ಕಥೆ" ನೆನಪಾಗುತ್ತದೆ. ಆಮೆ ಓಟದ ಸ್ಪರ್ಧೆಯಲ್ಲಿ ವಿಶ್ರಾಂತಿ ಪಡೆಯದೆ ನಿಧಾನಗತಿಯಲ್ಲಾದರೂ ಸತತ ಪ್ರಯತ್ನಪಟ್ಟು ಓಡಿ ದಡ ಸೇರಿತು. ಆದರೆ ಮೊಲ ವಿಶ್ರಾಂತಿ ಪಡೆಯಲು ಹೋಗಿ ಸೋತಿತು.

ಆತ್ಮೀಯ ವಿದ್ಯಾರ್ಥಿಗಳೇ ಈ ದೃಷ್ಟಾಂತ ನಾನ್ಯಾಕೆ ಹೇಳುತ್ತಿದ್ದೇನೆಂದರೆ ವಿದ್ಯಾರ್ಥಿ ಜೀವನವು ಸಹ ಒಂದು ಸ್ಪರ್ಧೆಯೇ. ಸ್ವಾಮಿ ವಿವೇಕಾನಂದರು ಒಂದು ಮಾತು ಹೇಳಲಿಲ್ಲವೇ " ನಿನ್ನ ಬಾಳಿನ ಶಿಲ್ಪಿ ನೀನೆ" ನಿಮ್ಮ ಹಣೆಬರಹ ಯಾರು ಬರೆಯುವುದಿಲ್ಲ,

ಪುಟ 8 ಕ್ಕೆ ➤

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕವಾಗಿ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡುವ ಬದಲು ಪ್ರತಿ ತಿಂಗಳ ಕೊನೆಯ ದಿನ ಜಮೆ ಮಾಡುವ ಕುರಿತು.

**ಓದಲಾಗಿದೆ:** 1) ಮಹಾಲೇಖಪಾಲರಿಗೆ ಉದ್ದೇಶಿಸಿರುವ ಸರ್ಕಾರದ ಪತ್ರ ಸಂಖ್ಯೆ: ಆಇ 73 ಬಿಪಿಎ 2023, ದಿನಾಂಕ:20/09/2023.

2) ಮಹಾಲೇಖಪಾಲರ ಪತ್ರ ಸಂಖ್ಯೆ: VLC 3/J/2023-24, ದಿನಾಂಕ: 12/10/2023.

**//**//**

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ AG Entry Exit Conference ನಲ್ಲಿ ಚರ್ಚಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ಪ್ರತಿ ತಿಂಗಳ ಕೊನೆಯ ದಿನ ಜಮೆ ಮಾಡಲು ಕೋರಲಾಗಿರುತ್ತದೆ.

ಈ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಮಹಾಲೇಖಪಾಲರು ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 2016ರ ನಿಯಮ 15(2)ರಲ್ಲಿ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕವಾಗಿ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡಬೇಕೆಂದು ಉಪಬಂಧಿಸಲಾಗಿರುವುದರಿಂದ, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕವಾಗಿ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡುವ ಬದಲು ಪ್ರತಿ ತಿಂಗಳ ಕೊನೆಯ ದಿನ ಜಮೆ ಮಾಡಲು ನಿಯಮಗಳಿಗೆ ತಿದ್ದುಪಡಿಯನ್ನು ತರಬೇಕಾಗಿರುತ್ತದೆ. ಆದರೆ ಕರಡು ನಿಯಮಗಳನ್ನು ಪ್ರಕಟಿಸಲು ಸಾಕಷ್ಟು ಕಾಲಾವಕಾಶವು ಬೇಕಾಗಿರುತ್ತದೆ.

ಅದರಂತೆ ಪರಿಶೀಲಿಸಿದ ಸರ್ಕಾರವು ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 2016ರ ನಿಯಮ 15(2)ಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಆದೇಶದ ಮೂಲಕ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 13 ಮುಭನಿ 2023,**
**ಬೆಂಗಳೂರು, ದಿನಾಂಕ: 18ನೇ ನವೆಂಬರ್, 2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕವಾಗಿ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡುವ ಬದಲು ಪ್ರತಿ ತಿಂಗಳ ಕೊನೆಯ ದಿನ ಜಮೆ ಮಾಡುವಂತೆ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 2016ರ ನಿಯಮ 15(2)ಕ್ಕೆ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನೇತ್ರಪ್ರಭಾ ಎಂ. ದಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು).

➢ ಪುಟ 7 ರಿಂದ.....

ನೀವೇ ಬರೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ದಿನಗಳಲ್ಲಿ ಉತ್ತಮವಾದ ರೀತಿಯಲ್ಲಿ ಅಭ್ಯಾಸ ಮಾಡಿದರೆ ಯಶಸ್ಸು ಖಂಡಿತ ಸಾಧ್ಯವಾಗುತ್ತದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಳ್ಳುವುದು ಅನಿವಾರ್ಯ. ಅದಕ್ಕಾಗಿ ಆತ್ಮೀಯ ವಿದ್ಯಾರ್ಥಿಗಳೆ ಅಮೂಲ್ಯವಾದ ಸಮಯ ಕಾಲಹರಣ ಮಾಡಿ ಕಳೆದುಹೋದ ಸಮಯಕ್ಕಾಗಿ ಚಿಂತಿಸಿ ಪಶ್ಚಾತ್ತಾಪ ಪಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಏಕೆಂದರೆ ಮಾನವನ ಜೀವನದಲ್ಲಿ ಸಮಯ ಅತ್ಯಮೂಲ್ಯವಾದುದು. ಸಮಯ ನಿಂತ ನೀರಲ್ಲ. ಅದು ಹರಿಯುತ್ತಿರುವ ಪ್ರವಾಹ. ಸಮಯ ಮತ್ತು ಸಮುದ್ರದ ಅಲೆಗಳು ಯಾರಿಗೂ ಕಾಯುವುದಿಲ್ಲ. ಸಮಯಕ್ಕೋಸ್ಕರ ನಾವು ಕಾಯಬೇಕೇ ಹೊರತು ಸಮಯ ನಮಗಾಗಿ ಕಾಯುವುದಿಲ್ಲ. "ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂಬ ಗಾದೆಯಂತೆ ಒಂದು ಬಾರಿ ಹೋದ ಸಮಯ ಮತ್ತೆ ಎಂದಿಗೂ ಮರಳಿ ಬರುವುದಿಲ್ಲ. ಹಣ ಕಳೆದಕೊಂಡರೆ ಮತ್ತೆ ಗಳಿಸಬಹುದು, ಆದರೆ ಕಳೆದುಹೋದ ಸಮಯ ಗಳಿಸಲಿಕ್ಕೆ ಸಾಧ್ಯವಿಲ್ಲ. ಮಾನವರಾದ ನಾವು ಸಾವಿರ, ಹತ್ತು ಸಾವಿರ, ಲಕ್ಷ, ಕೋಟಿಗಳಷ್ಟು ದುಡ್ಡು ಕೊಟ್ಟು ದುಬಾರಿ ಗಡಿಯಾರಗಳನ್ನು ಕೊಂಡುಕೊಳ್ಳಬಹುದು. ಆದರೆ ಸಮಯವನ್ನಲ್ಲ. ಆದ್ದರಿಂದ ವಿದ್ಯಾರ್ಥಿಗಳಾಗಲಿ, ದೊಡ್ಡವರಾಗಲಿ ಆಲಸ್ಯತನದಿಂದ ಕಾಲಹರಣ ಮಾಡದೆ ತಾವು ಕೈಗೊಳ್ಳುವ ಕೆಲಸದ ಬಗ್ಗೆ ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಗುರು ಬಸವಣ್ಣನವರ ವಚನದಂತೆ " ನಾಳೆಯ ದಿನಕ್ಕಿಂತ ಇಂದಿನ ದಿನ ಲೇಸೆಂದು ಇಂದಿನ ದಿನಕ್ಕಿಂತ ಈಗಲೇ ಲೇಸೆಂದು" ಅಂದಿನ ಕೆಲಸವನ್ನು ಆ ಕ್ಷಣದಲ್ಲೇ ಮಾಡಿ ಮುಗಿಸಬೇಕು. ಓದುವುದಾಗಲಿ ಕೆಲಸವನ್ನಾಗಲಿ ಮಾಡುವುದಂತು ತಪ್ಪಿದ್ದಲ್ಲ. ಅಂದ ಮೇಲೆ ನಿರ್ಲಕ್ಷ ತೋರದೆ ಸರಿ ಅನ್ನಬೇಕು ಕೆಲಸ ಪ್ರಾರಂಭಿಸಿ ಮುಂದೆ ಸಾಗಬೇಕು.

ಎಷ್ಟೋ ವ್ಯಕ್ತಿಗಳು ಹೇಳುತ್ತಾರೆ ನನ್ನ ಕೆಲಸ ಮಾಡಲು ನನಗೆ ಸಮಯವಿಲ್ಲ, ಬೇರೆ ಕೆಲಸ ಮಾಡಲು ನನಗೆ ಸಮಯ ಎಲ್ಲಿದೆ? ಎಂದು ಹೇಳುತ್ತಾರೆ. ಅಲ್ಲದೆ ಬೇರೆ ಕೆಲಸ ಮಾಡಲು ನನಗೆ ಇನ್ನಷ್ಟು ಹೆಚ್ಚಿನ ಸಮಯವಿದ್ದರೆ ಚೆನ್ನಾಗಿರುತ್ತಿತ್ತು ಅನ್ನುತ್ತಾರೆ. ಒಂದು ರೀತಿಯಲ್ಲಿ ನೋಡಿದರೆ 'ದೇವರು ಪ್ರತಿಯೊಬ್ಬ ಮನುಷ್ಯನಿಗೂ ಸಮನಾಗಿ ನೀಡಲ್ಪಟ್ಟಿರುವ ಒಂದು ಉಡುಗೊರೆ ಯಾವುದೆಂದರೆ ಅದು ಸಮಯವೆಂದು ಹೇಳಬಹುದು. ಜಾಕನ್

ಪುಟ 10 ಕ್ಕೆ ➢

➢ ಪುಟ 3 ರಿಂದ.....

5. ಮಕ್ಕಳು ರಾಜ್ಯಭಾಷೆ (ಮಾತೃಭಾಷೆ) ಯಲ್ಲಿ ಶಿಕ್ಷಣ ಪಡೆಯುವುದರ ಲಾಭವನ್ನು ಪ್ರಚುರಪಡಿಸುವುದು.
6. ರಾಜ್ಯೋತ್ಸವದ ಸಮಯದಲ್ಲಿ ಭಾಷಾಭಿಮಾನ ಬರುವಂತೆ ವಿಶೇಷ ಅಭಿಯಾನ ನಡೆಸುವುದು.

ನಮ್ಮ ಸಮಾಜದಲ್ಲೊಂದು ಕೊರತೆ ಇದೆ. ಅದೆಂದರೆ ಎಲ್ಲವೂ ಸರ್ಕಾರ ಮಾಡಲಿ, ನಮ್ಮದೇನೂ ಜವಾಬ್ದಾರಿ ಇಲ್ಲ ಎಂದು ಭಾವಿಸುವುದು. ಮಕ್ಕಳ ಶಿಕ್ಷಣದಲ್ಲಿ ನಮ್ಮದೂ ಜವಾಬ್ದಾರಿ ಇದೆ.

1. ಮನೆಯಲ್ಲಿ ಕನ್ನಡದಲ್ಲೇ ಮಾತನಾಡುವುದು
2. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ (ರಾಜ್ಯಭಾಷೆ)ಯೇ ಉತ್ತಮ ಎಂದು ವೈಜ್ಞಾನಿಕವಾಗಿ ಸಾಬೀತಾಗಿರುವ ಸಂಗತಿ ಅರಿಯುವುದು.
3. ಅವರಿವರು ಮಾಡಿದರೆಂದು ಅವರನ್ನು ಕಾಪಿ ಮಾಡದಿರುವುದು.

ಸಮಾಜದ ಮನಃ ಪರಿವರ್ತನೆ ಹೇಳಿದಷ್ಟು ಸುಲಭ ಸಾಧ್ಯವಿಲ್ಲ. ಇದಕ್ಕೆ ಕನ್ನಡಾಭಿಮಾನಿಗಳು, ಸಾಹಿತಿಗಳು, ವೈಜ್ಞಾನಿಕ ಚಿಂತನೆಯುಳ್ಳವರು ಮುಂತಾದವರ ಸಾಮೂಹಿಕ ಪರಿಶ್ರಮ ಅಗತ್ಯ.

ಬದಲಾವಣೆ ಪ್ರಕೃತಿ ನಿಯಮ. ಪ್ರಯತ್ನಿಸಿದರೆ ಆಗೇ ಆಗುತ್ತದೆ. ಇದಕ್ಕೆ ಇಸ್ರೇಲಿನ ಜ್ಯೂ ಜನಾಂಗವೇ ಸಾಕ್ಷಿ.

ಎರಡು ಸಾವಿರ ವರ್ಷಗಳ ಹಿಂದೆ ತಮ್ಮ ಮಾತೃಭೂಮಿಯ ಮೇಲೆ ದಾಳಿ ಮಾಡಿದ ಶತ್ರುಗಳಿಂದ ಓಡಿಸಲ್ಪಟ್ಟ ಯಹೂದಿಗಳು ಇಷ್ಟು ದೀರ್ಘಕಾಲ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನೆಲೆಕಂಡುಕೊಂಡು ತಮ್ಮ ಮಾತೃಭಾಷೆ 'ಹೀಬ್ರೂ'ವನ್ನು ಮರೆತಿದ್ದ ಜನಾಂಗ 1948ರಲ್ಲಿ ತಾಯ್ನಾಡಿಗೆ ಮರಳಿದಾಗ ಮೊದಲ ಮಾಡಿದ ಕೆಲಸ ಎಲ್ಲರಿಗೂ ಹೀಬ್ರೂ ಕಲಿಸಿದ್ದು. ಆಡಳಿತದಲ್ಲಿ, ಶಿಕ್ಷಣದಲ್ಲಿ ಮಣ್ಣಿನ ಭಾಷೆ ಹೀಬ್ರೂವನ್ನು ತಂದು ಬೆಳೆಸಿದ್ದು. ಇಂದು ವಾಣಿಜ್ಯ, ಕ್ರೀಡೆಯ ಆಡಳಿತದ, ಶಿಕ್ಷಣದ ಎಲ್ಲಾ ವಿಧದ ಸಾಮಾಜಿಕ ವ್ಯವಹಾರಗಳ ಭಾಷೆಯಾಗಿ ಪೂರ್ಣಪ್ರಮಾಣದಲ್ಲಿ ಕಳೆದಿದ್ದ ತನ್ನ ಸ್ಥಾನವನ್ನು ತುಂಬಿದೆ. ಇದಕ್ಕೆ ಕಾರಣ ಆ ಜನರ ಇಚ್ಛಾಶಕ್ತಿ. ಶಿಕ್ಷಣದಲ್ಲಂತೂ ಪ್ರಾಥಮಿಕ ಸ್ತರದಿಂದ ಉನ್ನತ ಶಿಕ್ಷಣ ಸ್ಥರದವರೆಗೆ ಹೀಬ್ರೂ ಭಾಷೆಗೇ ಉನ್ನತ ಸ್ಥಾನ. ಅಲ್ಲಿನ ಮಕ್ಕಳು ಇಂಗ್ಲೀಷನ್ನು ಕಲಿಯುತ್ತಾರೆ ಆದರೆ ಅದು ಪ್ರಥಮ ಭಾಷೆಯಾಗಿ ಅಲ್ಲ. ಕೇವಲ ಒಂದು ಭಾಷೆಯಾಗಿ.

ಜ್ಯೂ ಜನಾಂಗ 2000 ವರ್ಷಗಳಿಂದ ಕಲಿಯದಿದ್ದ ಭಾಷೆಯನ್ನು ಕಲಿತು ವ್ಯವಹಾರದಲ್ಲಿ ತರಬಹುದಾದರೆ ಅದಕ್ಕಿಂತ ಹಿಂದಿನ ಭಾಷೆಯಾದ ನಮ್ಮ ಕನ್ನಡವನ್ನು ನಾವೇಕೆ ನಮ್ಮ ಸಾಮಾಜಿಕ ಜೀವನದ ಎಲ್ಲ ಸ್ತರದ ಭಾಷೆಯಾಗಿ ಉಪಯೋಗಿಸಲು ಆಗುತ್ತಿಲ್ಲ? ಇದು ಪ್ರತಿಯೊಬ್ಬ ಕನ್ನಡಿಗನೂ, ಕನ್ನಡನಾಡಿನ ಅನ್ನ ಉಣ್ಣುತ್ತಿರುವವರೂ ಯೋಚಿಸಬೇಕಾದ ವಿಚಾರ.

●

➢ ಪುಟ 6 ರಿಂದ.....

ದ್ಯೋತಕವೇ ದೀಪಾವಳಿ. ಸೆರಮನೆಯ ಗಾಢ ಕತ್ತಲೆಯಲ್ಲಿದ್ದವರನ್ನು ಬಂಧಮುಕ್ತಗೊಳಿಸಿದ ಶ್ರೀ ಕೃಷ್ಣ ಅವರನ್ನು ಬೆಳಕಿನೆಡೆಗೆ ಕೊಂಡೊಯ್ದ ಸಂಭ್ರಮದ ಆಚರಣೆಯೇ ದೀಪಾವಳಿ. ಭಾಗವತ ಪುರಾಣದ ಪ್ರಕಾರ ಇಂದ್ರನ ದಾಳಿಯಿಂದ ಜನರನ್ನು ಹಾಗೂ ಗೋವುಗಳನ್ನು ಗೋವರ್ಧನಗಿರಿಯಿಂದ ರಕ್ಷಿಸಿ ಇಂದ್ರನನ್ನು ಸೋಲಿಸಿದ ದಿನವೇ ದೀಪಾವಳಿಯಾಗಿದೆ. ಆದ ಕಾರಣ ಕಾರ್ತಿಕ ಶುಕ್ಲ ಪಾಡ್ಯಮಿಯಂದು ಗೋಪೂಜೆ ಮತ್ತು ಗೋವರ್ಧನ ಪೂಜೆಯನ್ನು ಇಂದಿಗೂ ಆಚರಿಸಲಾಗುತ್ತಿದೆ.

ದೀಪಾವಳಿ ಐದು ದಿನಗಳ ಆಚರಣೆ. ಮೊದಲ ದಿನ ನೀರು ತುಂಬುವುದು, ಎರಡನೇ ದಿನ ನರಕ ಚತುರ್ದಶಿ, ಮೂರನೇ ದಿನ ದೀಪಾವಳಿ ಅಮಾವಾಸ್ಯೆ, ನಾಲ್ಕನೆಯ ದಿನ ಬಲಿಪಾಡ್ಯಮಿ ಹಾಗೂ ಐದನೇ ದಿನ ಯಮದ್ವಿತೀಯ ಆಚರಣೆ. ದೀಪಾವಳಿಯ ಮೊದಲ ದಿನ ಎಣ್ಣೆ ಸ್ನಾನ ಮಾಡುವ ಸಂಪ್ರದಾಯವಿದೆ. ಕಾರಣವೆಂದರೆ ಸಮುದ್ರ ಮಂಥನ ಸಮಯದಲ್ಲಿ ಶ್ರೀ ವಿಷ್ಣು ಅಮೃತಕಲಶದೊಂದಿಗೆ ಧನ್ವಂತರಿಯಾಗಿ ಅವತಾರ ತಳೆದ ನೆನಪಿಗಾಗಿ ಎಣ್ಣೆ ಸ್ನಾನ ಮಾಡುವ ವಾಡಿಕೆ. ಎಣ್ಣೆಯಲ್ಲಿ ಧನಲಕ್ಷ್ಮಿ ಇರುವಳೆಂಬ ನಂಬಿಕೆ. ಈ ರೀತಿ ಮಾಡುವುದರಿಂದ ಸಕಲ ಪಾಪಗಳು ಕಳೆದು ಪುಣ್ಯ ಪ್ರಾಪ್ತಿಯಾಗಲೆಂಬ ನಂಬಿಕೆ ಇದೆ.

ಪೌರಾಣಿಕವಾಗಿ ಬಲಿಪಾಡ್ಯಮಿಯಂದು ಮಹಾವಿಷ್ಣು ವಾಮನ ಅವತಾರವೆತ್ತಿ ದಾನಶೂರ ದಾನವ ಚಕ್ರವರ್ತಿ ಬಲಿಯಿಂದ ಮೂರು ಹೆಜ್ಜೆಗಳ ದಾನ ಪಡೆದು ಆಕಾಶ– ಭೂಮಿಗಳ ಮೇಲೆ ಎರಡು ಹೆಜ್ಜೆಯಿಟ್ಟು, ಮೂರನೆಯ ಹೆಜ್ಜೆಯನ್ನು ಇರಿಸಲು ಜಾಗ ಇಲ್ಲದೆ ಹೋಗಿ, ಬಲಿಯ ಕೋರಿಕೆಯಂತೆ ಆತನ ಶಿರದ ಮೇಲೆ ಇಟ್ಟು ತ್ರಿವಿಕ್ರಮನಾಗಿ ಆತನನ್ನು ಪಾತಾಳಕ್ಕೆ ತುಳಿದ ದಿನವೇ ಬಲಿಪಾಡ್ಯಮಿ. ಬಲಿಚಕ್ರವರ್ತಿಯ ಭಕ್ತಿ ಮತ್ತು ದಾನಕ್ಕೆ ಮನಸೋತ ಮಹಾವಿಷ್ಣು, ಬಲಿಯ ನೆನಪಿಗಾಗಿ ಪ್ರತಿವರ್ಷ ಆತನನ್ನು ನೆನೆಯುವ ದಿನವನ್ನಾಗಿ ಬಲಿಪಾಡ್ಯಮಿ ಆಚರಿಸುವಂತಾಗಲಿ ಎಂದು ವರವನ್ನಿತ್ತನಂತೆ.

ಜೈನಧರ್ಮದ ಕಡೆಯ ತೀರ್ಥಂಕರರಾದ ಮಹಾವೀರರು ಪಾವಾಪುರಿಯಲ್ಲಿ ನಿರ್ವಾಣ ಹೊಂದಿದ ದಿನವೇ ದೀಪಾವಳಿಯಾಗಿದೆ. ಮಹಾವೀರರ ಕೈವಲ್ಯ ಜ್ಞಾನದಿಂದ ಇಡೀ ಜಗತ್ತೇ ಬೆಳಗಿತು ಎಂಬ ನಂಬಿಕೆಯೊಂದಿಗೆ ಸಮಸ್ತ ಜೈನರು ದೀಪಾವಳಿಯನ್ನು ಆರಾಧಿಸಿ, ಆಚರಿಸುತ್ತಾರೆ. ಸಿಖ್ಖರ ಗುರು ಹರಗೋವಿಂದರು 25 ಹಿಂದೂ ಮಹಾರಾಜರುಗಳನ್ನು ಮೊಘಲರಿಂದ ಬಂಧ ಮುಕ್ತಗೊಳಿಸಿದ ದಿನವೇ ದೀಪಾವಳಿಯಾಗಿದೆ. ಆದ್ದರಿಂದ ಸಿಖ್ ಬಾಂಧವರಿಗೆ ದೀಪಾವಳಿ ವಿಶೇಷ ಹಬ್ಬವಾಗಿದೆ.

**ಜ್ಞಾನದ ಬಲದಿಂದ ಅಜ್ಞಾನದ ಕೇಡು**
**ಜ್ಯೋತಿಯ ಬಲದಿಂದ ತಮಂಧದ ಕೇಡು!**

ಎಂಬ ಬಸವಣ್ಣನವರ ಮಾತು ದೀಪಾವಳಿಯ ಸಂದರ್ಭಕ್ಕೆ ಹಿಡಿದ ಕನ್ನಡಿಯಾಗಿದೆ. ಒಟ್ಟಾರೆ ದೀಪಾವಳಿಯು ನಮ್ಮ ಮನೆ ಮನಗಳಲ್ಲಿ ಅರಿವಿನ ಜ್ಞಾನದ ಜ್ಯೋತಿಯನ್ನು ಹೊತ್ತಿಸಿ ಆ ಮೂಲಕ ನಾವೂ ಸಹ ದೀಪದಂತೆ ಬೆಳಗಿ ನಮ್ಮ ಸಮಾಜವನ್ನು ಸಹ ಬೆಳಕಿನೆಡೆಗೆ ಕರೆದೊಯ್ಯುವುದು ಪ್ರಸಕ್ತದ ಅನಿವಾರ್ಯವಾಗಿದೆ.

ದೀಪಾವಳಿ ಎಂದರೆ ಕೇವಲ ಸಿಡಿಮದ್ದು ಸಿಡಿಸಿ, ವಾತಾವರಣವನ್ನು ಕಲುಷಿತಗೊಳಿಸುವುದಲ್ಲ, ಬದಲಿಗೆ ನಮ್ಮಲ್ಲಿರುವ ಅಂಧಶ್ರದ್ಧೆ, ಅಂಧಕಾರಗಳನ್ನು ಸ್ಫೋಟಗೊಳಿಸಿ ನಾವೇ ಬೆಳಕಿನ ಆಕರವಾಗುವುದೇ ಆಗಿದೆ.

●

**ನಂನಮ್ಮ ಭಾಷೆಯ ವಿಷಯದಲ್ಲಿ ನಿರಭಿಮಾನವೂ ಸಲ್ಲದು, ದುರಭಿಮಾನವೂ ಸಲ್ಲದು. – ರಂ.ಶ್ರೀ. ಮುಗಳಿ**

➢ ಪುಟ 5 ರಿಂದ.....

ತಾಲ್ಲೂಕಿನ ಗಿರಿಯಾಪುರದಲ್ಲಿ ಸಿ. ಸುಬ್ರಹ್ಮಣ್ಯಮ್ ಅಧ್ಯಕ್ಷತೆಯಲ್ಲಿ ನಡೆದಿತ್ತು.

ಕಡೂರು ಅಧಿವೇಶನದ ನಂತರ ರಾಮಸ್ವಾಮಿ, ಗೊರೂರು, ಜಿ. ಎಂ. ಜವಳಿ, ಕೆ.ಎಂ.ರುದ್ರಪ್ಪ, ಕೆ. ಎನ್. ನೀಲಶೇಖರ ಶೆಟ್ಟಿ, ಆರ್. ಎಸ್. ಆರಾಧ್ಯ, ದೆಹಲಿಗೆ ಹೋದರು. 1949 ರ ಅಕ್ಟೋಬರ್ ನಲ್ಲಿ ದೆಹಲಿಯಲ್ಲಿ ಪಂಡಿತ ನೆಹರು, ಪಟ್ಟಾಭಿ ಸೀತಾರಾಮಯ್ಯ, ವಲ್ಲಭಭಾಯಿ ಪಟೇಲ್, ಡಾ. ರಾಜೇಂದ್ರ ಪ್ರಸಾದ್ ಭೇಟಿ ಮಾಡಿ, ಮನವಿ ಅರ್ಪಿಸಿದರು. ಮನವಿ ಕಂಡ ನಾಯಕರ ಪ್ರತಿಕ್ರಿಯೆ ಭಿನ್ನರೀತಿಯಲ್ಲಿತ್ತು. ಪಟ್ಟಾಭಿಯವರು ಬೆಂಬಲಿಸಿದ್ದರೆ, ನೆಹರು, ಪಟೇಲರ ಉತ್ತರ ನಕಾರಾತ್ಮಕವಾಗಿತ್ತು. ಪಟೇಲ್ ಭೇಟಿಯಾದಾಗ ರಾಮಸ್ವಾಮಿಗಳ ಗುಂಪಿನಲ್ಲಿ ಟಿ. ಸಿದ್ಧಲಿಂಗಯ್ಯನವರೂ ಇದ್ದರು. ಆಂಧ್ರ ರಾಜ್ಯಕ್ಕೆ ಒಪ್ಪಿಗೆ ನೀಡಿ ಕರ್ನಾಟಕಕ್ಕೆ ಮಾತ್ರ ನಕಾರ ಹೇಳಿದ್ದು ಕನ್ನಡಿಗರ ಅಸಮಾಧಾನಕ್ಕೆ ಕಾರಣವಾಗಿದೆಯೆಂಬುದು ನಿಯೋಗದ ಅಹವಾಲಾಗಿತ್ತು. ಆಗಿನ ಸಂಭಾಷಣೆ ಮಿತವೂ, ಸೂಕ್ಷ್ಮವೂ ಆಗಿತ್ತು:

**ಪಟೇಲ್ :** ಆಂಧ್ರದೊಡನೆ ಕರ್ನಾಟಕ ರಾಜ್ಯರಚನೆ ಹೇಗೆ ಸಾಧ್ಯ? ರಾಜರನ್ನು ಏನು ಮಾಡುತ್ತೀರಿ?

**ರಾಮಸ್ವಾಮಿ:** ಅವರನ್ನು ಹೊಸರಾಜ್ಯದ ಮುಖ್ಯಸ್ಥರನ್ನಾಗಿ ಮಾಡಿ. ಮೈಸೂರಿಗೆ ಉಳಿದ ಭಾಗಗಳನ್ನೆಲ್ಲ ಸೇರಿಸಿ.

**ಪಟೇಲ್:** ಸಾಧ್ಯವಿಲ್ಲ. ದೇಶೀಯ ಸಂಸ್ಥಾನಗಳನ್ನು ವಿಸ್ತಾರ ಮಾಡುವುದು ಆಗದ ಮಾತು.

**ರಾಮಸ್ವಾಮಿ :** ನಮಗೆ ಕರ್ನಾಟಕ ಬೇಕು. ರಾಜರು ಇರಲಿ, ಬಿಡಲಿ, ಅಗತ್ಯವಾದರೆ ಅವರನ್ನು ತೆಗೆದು ರಾಜ್ಯ ಮಾಡಿ.

**ಪಟೇಲ್:** ಯಾರು ಈ ಮಾತು ಹೇಳುತ್ತಾರೆ?

**ರಾಮಸ್ವಾಮಿ:** ಜನರೆಲ್ಲ ಹೇಳುತ್ತಾರೆ.

**ಪಟೇಲ್:** ಮೈಸೂರು ನಾಯಕರು ಇದನ್ನು ಹೇಳುತ್ತಿಲ್ಲ. ನೀವು ಇಲ್ಲಿ ಯಾಕೆ ಇದನ್ನು ಹೇಳುತ್ತೀರಿ? ನಿಮ್ಮ ರಾಜ್ಯಕ್ಕೆ ಹೋಗಿ ಅಲ್ಲಿ ಹೇಳಿ, ಮಾತು ಮುಗಿಸಿ ಹೊರಡಲಿದ್ದ ಪಟೇಲರನ್ನು ಸಿದ್ಧಲಿಂಗಯ್ಯ ಕೇಳಿದರು: "ಸ್ವಾಮಿ, ಹೈದರಾಬಾದಿನಲ್ಲಿ ಮಾರಣಹೋಮ ಆಗುತ್ತಿದೆ. ಸಾವಿರಾರು ಹಿಂದೂಗಳನ್ನು ರಜಾಕಾರರು ಕೊಲ್ಲುತ್ತಿದ್ದಾರೆ. ತಾವು ಏನೂ ಕ್ರಮ ಕೈಗೊಳ್ಳದಿದ್ದರೆ ಹೇಗೆ?"

ಮಾತನಾಡದೆ ನಗುಮುಖದಿಂದ ತಲೆ ಅಲ್ಲಾಡಿಸಿ ಒಳಗೆ ಹೋದ ಪಟೇಲರ ವ್ಯಕ್ತಿತ್ವ ನಂತರ ಗೊತ್ತಾಗಿತ್ತು. ಹಿಂದಿನ ರಾತ್ರಿಯೇ ಭಾರತೀಯ ಪಡೆ ಹೈದರಾಬಾದ್ ರಾಜ್ಯದೊಳಗೆ 50 ಮೈಲಿ ಪ್ರವೇಶಿಸಿತ್ತು. ಮಾತನಾಡದೆ ಕೆಲಸ ಮಾಡುವ ವ್ಯಕ್ತಿಯಾಗಿದ್ದರು ಅವರು. ಹಾಗೇ ಮಹಾರಾಜರನ್ನು ತೆಗೆಯದೆ ಕನ್ನಡ ರಾಜ್ಯರಚನೆ ಸಾಧ್ಯವಿಲ್ಲವೆಂಬುದೂ ಅವರ ಖಂಡಿತ ಸೂಚನೆಯೆಂದು ಅರ್ಥವಾಗಿತ್ತು.

ಆದರೂ ಪ್ರಯತ್ನ ಮುಂದುವರಿದೇ ಇತ್ತು. ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಹಾರನಹಳ್ಳಿ ರಾಮಸ್ವಾಮಿಯವರ ಪಾತ್ರ ಮಹತ್ತ್ವದ್ದು. ಸ್ವಾತಂತ್ರ್ಯ ಹೋರಾಟ, ಶಿಕ್ಷಣ, ಕಾನೂನು ಕ್ಷೇತ್ರಗಳಲ್ಲಿ ಮಾತ್ರವಲ್ಲದೆ, ಏಕೀಕರಣದ ಚಳುವಳಿಯಲ್ಲಿಯೂ ನಾಯಕನ ಹೊಣೆಯನ್ನು ನಿರ್ವಹಿಸಿದ್ದು ಅವರ ವೈವಿಧ್ಯಮಯ ಚಟುವಟಿಕೆಗಳಲ್ಲಿ ಸೇರಿಸಲೇಬೇಕಾದ ಅಂಶವಾದರೂ ಪ್ರಾರಂಭದ ಹಂತದಿಂದಲೂ ದುಡಿದು ಛಲ ಸಾಧಿಸಿದವರು ಅವರು.

(ಮುಂದುವರೆಯುವುದು...)

➢ ಪುಟ 8 ರಿಂದ.....

ಬ್ರೌನ್ ಎನ್ನುವ ಚಿಂತಕರು ಹೇಳುತ್ತಾರೆ "ಯಾರು ನನಗೆ ಕೆಲಸ ಮಾಡಲು ಸಮಯ ಸಾಲದು ಎಂದು ದೂರಬೇಡಿ" ದಿನದ ಇಪ್ಪತ್ತನಾಲ್ಕು ಗಂಟೆಗಳನ್ನು ಬಳಸಿಕೊಂಡು ಇತಿಹಾಸ ಸೃಷ್ಟಿಸಿದ ಅನೇಕ ಮಹಾನ ವ್ಯಕ್ತಿಗಳಿದ್ದಾರೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಉದಾಹರಣೆಗೆ ಬಸವೇಶ್ವರ, ಸ್ವಾಮಿ ವಿವೇಕಾನಂದ, ಬುದ್ಧ, ಸಿ.ವಿ ರಾಮನ್, ಲೂಯಿಪಾಶ್ಚರ್, ಥಾಮಸ್ ಅಲ್ವಾ ಎಡಿಸನ್, ಐನ್‌ಸ್ಟೀನ, ಕಿತ್ತೂರು ರಾಣಿ ಚೆನ್ನಮ್ಮಾ, ಅಂಬೇಡ್ಕರ, ಮಹಾತ್ಮಾಗಾಂಧಿ, ಅಬ್ದುಲ್ ಕಲಾಂ,. ಕಲ್ಪನಾ ಚಾವ್ಲಾ, ನರೇಂದ್ರಮೋದಿ ಮುಂತಾದ ಮಹಾತ್ಮರೆಲ್ಲರಿಗೂ ಸಿಕ್ಕ ಸಮಯವೇ ನಮಗೂ ದೊರೆತಿದೆ ಎಂಬುದಂತೂ ಸತ್ಯ. ಸಿಕ್ಕ ಸಮಯ ಸದುಪಯೋಗಪಡಿಸಿಕೊಂಡು ಇತಿಹಾಸದಲ್ಲಿ ಅಮರವಾದ ಇಂತಹ ಒಂದು ಪಡೆ ಇದ್ದರೆ ಇನ್ನೊಂದೆಡೆ ಸಿಕ್ಕ ಸಮಯ ಸದುಪಯೋಗ ಪಡೆದುಕೊಳ್ಳದೆ ಜೀವನದಲ್ಲಿ ಏನೇನೂ ಸಾಧಿಸದೆ ಬಹಳಷ್ಟು ಜನರು ಕಾಲಗರ್ಭದೊಳಗೆ ಅಜ್ಞಾನ ವ್ಯಕ್ತಿಗಳಾಗಿ ಕಳೆದು ಹೋಗಿದ್ದಾರೆ. ಈ ಎರಡು ವರ್ಗದ ಜನರ ನಡುವೆ ಇರುವ ವ್ಯತ್ಯಾಸವೇನೆಂದರೆ ಅದು ಒಂದು ಸಮಯ ಪರಿಪಾಲನೆ ಅಂತಹ ಹೇಳಬಹುದು.

ಅದಕ್ಕಾಗಿ ಆತ್ಮೀಯ ವಿದ್ಯಾರ್ಥಿಗಳೆ, ನಿಮ್ಮ ಜೀವನದಲ್ಲಿ ನಿರ್ದಿಷ್ಟವಾದ ಗುರಿಯಿರಲಿ. ಅದಕ್ಕೆ ತಕ್ಕಂತೆ ಯೋಜನೆಯನ್ನು ಹಾಕಿಕೊಂಡು ಗುರುವಿನ ಮಾರ್ಗದರ್ಶನ ಪಡೆದು ಸತತ ಪ್ರಯತ್ನಪಟ್ಟು ಸಮಯಕ್ಕೆ ಸರಿಯಾಗಿ ಪ್ರತಿಯೊಂದು ಕಾರ್ಯವನ್ನು ಪ್ರಾರಂಭಿಸಿ ಬೆಳಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲುಗುವುದರವರೆಗೆ ಪ್ರತಿಯೊಂದು ಕೆಲಸವನ್ನು ಅಚ್ಚುಕಟ್ಟಾಗಿ ಶಿಸ್ತಿನಿಂದ ಕ್ರಮಬದ್ಧವಾಗಿ ಪ್ರಾರಂಭಿಸಿ ಕೊನೆಗೊಳಿಸಿ. ನಿಮ್ಮ ಗುರಿ ಎಷ್ಟೇ ದೊಡ್ಡದಿದ್ದರೂ ಸಹ ಹೇಗೆ ಕೈಯಳತೆಯ ದೂರದಲ್ಲಿರುವ ವಸ್ತುವನ್ನು ಪಡೆಯುವಂತೆ ನೀವು ಸುಲಭವಾಗಿ ಸಾಧಿಸಬಹುದು. ಯಾರು ಜೀವನದಲ್ಲಿ ಸಮಯಕ್ಕೆ ಮಹತ್ವ ಹಾಗೂ ಪ್ರಾಮುಖ್ಯತೆ ಕೊಡುತ್ತಾರೆ ಅವರು ಜೀವನದಲ್ಲಿ ಯಶಸ್ಸು ಪಡೆಯುತ್ತಾರೆ. ಆತ್ಮೀಯ ವಿದ್ಯಾರ್ಥಿಗಳೆ ಜೀವನದಲ್ಲಿ ಪ್ರತಿ ಕ್ಷಣ ಮಹತ್ವದ್ದು. ಏಕೆಂದರೆ ಜೀವನ ಫುಟ್‌ಬಾಲ್ ಆಟವಿದ್ದಂತೆ. ಫುಟ್‌ಬಾಲ್ ಆಟದ ಮೈದಾನದಲ್ಲಿದ್ದ ಆಟಗಾರರು ಒಂದು ಕ್ಷಣ ಬೇರೆಡೆ ನೋಡಿದರೆ ಬೇರೆ ಆಟಗಾರ ಗೋಲು ಬಾರಿಸುತ್ತಾನೆ. ಅದೇ ರೀತಿ ರನ್ನಿಂಗ್ ರೇಸಿನಲ್ಲಿನ ಆಟಗಾರ ಸಹ ಅಷ್ಟೆ. ಎಲ್ಲಾ ಆಟಗಾರರಿಗಿಂತ ಮುಂದೆ ಇದ್ದರೂ ತನ್ನ ಹಿಂದೆ ಬೇರೆಯವರು ಬರುತ್ತಿದ್ದಾರೋ ಇಲ್ಲವೋ ಎಂದು ಹಿಂದೆ ನೋಡುತ್ತಿರುವುದರೊಳಗೆ ಬೇರೆ ಆಟಗಾರ ಇವನನ್ನ ಹಿಂದೆ ಹಾಕಿ ಮುಂದೆ ಹೋಗುತ್ತಾನೆ ಎಂಬುದು ಯಾರು ಮರೆಯಬಾರದು. ಅದಕ್ಕಾಗಿ ಒಂದು ಕ್ಷಣವು ಸಹ ನಮ್ಮ ಜೀವನದಲ್ಲಿ ಅತ್ಯಮೂಲ್ಯವಾದುದು. ಅದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಸಮಯವೇ ಸಂಪತ್ತು ಎನ್ನುವುದನ್ನು ಅರಿತು ಹಾಳು ಹರಟೆಯಲ್ಲಿ ಕಾಲಹರಣ ಮಾಡದೆ ಸಮಯದೊಂದಿಗೆ ನಡೆದರೆ ಬಾಳಿನಲ್ಲಿ ಬರುವುದಿಲ್ಲ ಯಾವತ್ತು ಯಾವುದೇ ಆಪತ್ತು. ●

# ಸಾಮಾಜಿಕ ಪರಿವರ್ತನೆಯಲ್ಲಿ ಕನಕದಾಸರು

"ಕನಕನನ್ನು ಕೆಣಕಬೇಡಿ ಕೆಣಕಿ ತಿಣಕಬೇಡಿ" ಎಂಬ ಜಾಣ್ನುಡಿಯು ಕನಕದಾಸರ ಪ್ರಕಾಂಡ ಪಾಂಡಿತ್ಯ ಮತ್ತು ಶ್ರೇಷ್ಠತೆಗೆ ಹಿಡಿದ ಕೈಗನ್ನಡಿಯಾಗಿದೆ. 12ನೇ ಶತಮಾನದಲ್ಲಿ ವಚನಕಾರರು ತಮ್ಮ ಪ್ರಭಾವ ಪೂರ್ಣ ವಚನಗಳಿಂದ ಸಾಮಾಜಿಕ ಕ್ರಾಂತಿ ಮಾಡಿದರೆ, 16ನೇ ಶತಮಾನದಲ್ಲಿ ದಾಸ ಶ್ರೇಷ್ಠರು ಭಕ್ತಿ ಮಾರ್ಗದಿಂದ ಜನ ಸಾಮಾನ್ಯರ ಮನಮುಟ್ಟುವಂತೆ ಕೀರ್ತನೆ, ಭಜನೆ ಮತ್ತು ಹಾಡುಗಳ ಮೂಲಕ ಅಂದಿನ ಸಮಾಜದಲ್ಲಿ ಇರುವ ಮೌಢ್ಯತೆ, ಅಜ್ಞಾನ, ಅಂಧಕಾರ, ಅಸಮಾನತೆ ಹಾಗೂ ಜಾತೀಯತೆಗಳೆಂಬ ಅನಿಷ್ಟ ಆಚರಣೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾರೆ. ಇಂತಹ ದಾಸ ಶ್ರೇಷ್ಠರಲ್ಲಿ ಪರಂದರ ದಾಸರು ಮತ್ತು ಕನಕದಾಸರು ಅಗ್ರಗಣ್ಯ. ಸ್ವತಃ ಪುರಂದರ ದಾಸರಿಂದಲೇ ಹೊಗಳಿಸಿಕೊಂಡ ಹೆಗ್ಗಳಿಕೆ ಕನಕದಾಸರದಾಗಿದೆ. ಕನಕದಾಸರದು ಅಮೋಘ ಮತ್ತು ಆಕರ್ಷಣೀಯವಾದ ಬಹುಮುಖ ವ್ಯಕ್ತಿತ್ವ. ಹಿಂದುಳಿದ ಕುಲದಲ್ಲಿ ಹುಟ್ಟಿದರೂ ಪ್ರತಿಭೆಯಲ್ಲಿ ಅತ್ಯುನ್ನತ ಶಿಖರವೆನಿಸಿದ ಕನಕದಾಸರು ಮಹಾನ್ ಮೇಧಾವಿಯೆಂದು ಹೇಳಿದರೆ ಸತ್ಯವನ್ನೇ ಹೇಳಿದಂತಾಗುತ್ತದೆ. ಅವರ 532ನೇ ಜಯಂತಿಯನ್ನು ನವೆಂಬರ್ 30 ರಂದು ನಾಡಿನಾದ್ಯಂತ ಆಚರಿಸುತ್ತಿರುವುದರ ನಿಮಿತ್ಯ ಲೇಖನ.

ಮಹಾತ್ಮರ ಹುಟ್ಟಿನ ಹಿನ್ನಲೆ ಅಪೂರ್ವವಾಗಿರುವಂತೆ, ಕನಕದಾಸರ ಹುಟ್ಟಿನ ಹಿನ್ನೆಲೆಯೂ ಅಷ್ಟೇ ಅಪೂರ್ವವಾಗಿದೆ. ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ಎಂಬ ಹಾಲುಮತ ದಂಪತಿಗಳ ಪುಣ್ಯ ಉದರದಲ್ಲಿ ಬಹು ದಿನಗಳ ಹರಕೆಯ ಫಲವಾಗಿ, ತಿರುಪತಿ ತಿಮ್ಮಪ್ಪನ ಕೃಪಾಶೀರ್ವಾದದಿಂದ ತಿಮ್ಮಪ್ಪ ಜನಿಸಿದನು.

ತಿಮ್ಮಪ್ಪನ ತಂದೆ ಬೀರಪ್ಪ. ಬಾಡ ಹಾಗೂ ಬಂಕಾಪುರದ ಢಣ್ಣಾಯಕನಾಗಿದ್ದನು. ಹೀಗೆ ಢಣ್ಣಾಯಕನ ಮಗನಾಗಿದ್ದ ತಿಮ್ಮಪ್ಪ, ತಿಮ್ಮಪ್ಪನಾಯಕನಾದನು. " ಬೆಳೆವ ಸಿರಿ ಮೊಳಕೆಯಲ್ಲಿಯೇ ಕಾಣು" ಎಂಬಂತೆ ಕನಕದಾಸರು ಬಾಲ್ಯದಲ್ಲಿಯೇ ಪ್ರತಿಭಾವಂತ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದನು. ತಾರುಣ್ಯದಲ್ಲಿ ತಿಮ್ಮಪ್ಪನಿಗೆ ದೊಡ್ಡ ಬಂಗಾರ(ಕನಕ)ದ ನಿಧಿ ಸಿಕ್ಕಿತು. ಈ ಸಂದರ್ಭದಲ್ಲಿ ಕನಕ ಮನಸ್ಸು ಮಾಡಿದ್ದರೆ ಆಗಬಹುದಿತ್ತು ಧನಿಕ! ಆದರೆ ಕ್ಷಣಿಕವಾದ ಸಂಪತ್ತಿನ ಬಗ್ಗೆ ಆಸೆ ಪಡದೇ ಅದನ್ನು ದಾನ– ಧರ್ಮ ಮಾಡಿದನು. ಅಲ್ಲದೇ ದೇವಾಲಯಗಳನ್ನು ಕಟ್ಟಲು ಮತ್ತು ಅವುಗಳ ಜೀರ್ಣೋದ್ದಾರ ಮಾಡಲು ಬಳಸಿದನು. ಇದರಿಂದಾಗಿ ತಿಮ್ಮಪ್ಪನಾಯಕ ಕನಕನಾಯಕನಾದನು.

ಜೀವನದಲ್ಲಿ ನೋವು–ನಲಿವುಗಳು ಒಂದೊಂದಾಗಿ ಹೇಳಿ ಕೇಳಿ ಬರದೇ, ಮರಭೂಮಿಯ ಒಂಟೆಗಳಂತೆ ಸಾಲು ಸಾಲಾಗಿ ಬರುತ್ತವೆ ಎಂಬ ಮಾತು ಕನಕನಾಯಕನ ಜೀವನದಲ್ಲಿ ಸತ್ಯವಾಯಿತು. ಚಿಕ್ಕಂದಿನಲ್ಲಿಯೇ ತನ್ನ ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾಗಿದ್ದ ಕನಕನ ದಾಂಪತ್ಯ ಜೀವನವೂ ಸಹ ಅಷ್ಟೊಂದು ತೃಪ್ತಿಕರವಾಗಿರಲಿಲ್ಲ. ಏಕೆಂದರೆ ಮದುವೆಯಾದ ಒಂದೆರಡು ವರ್ಷಗಳಲ್ಲಿಯೇ ಮಡದಿ ಹಾಗೂ ಮಕ್ಕಳನ್ನು ಕಳೆದುಕೊಂಡು ಏಕಾಂಗಿಯಾದನು. ಇದರಿಂದ ಕನಕದಾಸರ ಜೀವನದಲ್ಲಿ ಪ್ರಮುಖ ಬದಲಾವಣೆಯಾಯಿತು. ಜೀವನದಲ್ಲಿಯ ಧನ–ಕನಕ, ಮಡದಿ– ಮಕ್ಕಳು, ಸುಖ–ದುಃಖ, ಜಯ–ಅಪಜಯ ಕ್ಷಣಿಕವಾದವುಗಳೆಂದು ಜೀವನದ ಅಸ್ಥಿರತೆಯ ಬಗ್ಗೆ ಅರಿತ ಕನಕನಾಯಕ, ಅಂತಿಮವಾಗಿ ದಾಸತ್ವವನ್ನು ಸ್ವೀಕರಿಸಿ ಕನಕದಾಸರಾದರು.

ದಾಸ ಶ್ರೇಷ್ಠ ಕನಕದಾಸರದು ಬಹುಮುಖ ವ್ಯಕ್ತಿತ್ವ. ಕವಿ, ಕಲಿ ಹಾಗೂ ಸಂತ ಈ ಮೂರರ ಮುಪ್ಪರಿಯಾಗಿ ದಾಸ ಪರಂಪರೆಯಲ್ಲಿ ತಮ್ಮದೇ ಆದಂತಹ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡು, ಅದನ್ನು ಬದುಕಿನುದ್ದಕ್ಕೂ ಬೆಳೆಸಿಕೊಂಡು ಬಂದಂತಹ ಶ್ರೇಯಸ್ಸು ಅವರದಾಗಿದೆ. ಸಮಾಜದಿಂದ ಶೋಷಣೆಗೆ ಒಳಗಾದ ಹಿಂದುಳಿದವನಾಗಿ ಹುಟ್ಟಿ ಸವರ್ಣೀಯರಿಂದ ಆದ ನೋವುಗಳನ್ನು ನುಂಗಿ ಅದನ್ನು ತನ್ನ ಹಾಡುಗಳ ಮೂಲಕ ಪ್ರತಿಭಟಿಸಿದ್ದಾರೆ. "ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯ ಏನಾದರೂ ಬಲ್ಲಿರಾ?" ಎಂದು ಕುಲದ ಶ್ರೇಷ್ಠತೆ ಮತ್ತು ಕನಿಷ್ಟತೆಯನ್ನು ಕುರಿತು ಹೇಳುವ ಕುಹಕಿಗಳನ್ನು ಕನಕದಾಸರು ಪ್ರಶ್ನಿಸಿದ್ದಾರೆ.

ದಾಸ ಪರಂಪರೆಯಲ್ಲಿ ಎದ್ದು ಕಾಣುವ ಉಜ್ವಲ ತಾರೆಯಂತಿರುವ ಕನಕದಾಸರು ಆಶುಕವಿಗಳಾಗಿದ್ದರು. ಸಮಾಜದಲ್ಲಿರುವ ಶ್ರೀಮಂತ– ಬಡವ, ಮೇಲು– ಕೀಳು ಇತ್ಯಾದಿ ತಾರತಮ್ಯಗಳನ್ನು ಹಾಡಿನ ಮೂಲಕ ಹೋಗಲಾಡಿಸಲು ಪ್ರಯತ್ನಿಸಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕನಕದಾಸರ ಕೊಡುಗೆ ಅವಿಸ್ಮರಣೀಯವಾಗಿದೆ. ಅವರ ಪ್ರಮುಖ ಕೃತಿರತ್ನಗಳೆಂದರೆ, ಮೋಹನತರಂಗಿಣಿ, ರಾಮಧಾನ್ಯಚರಿತ್ರೆ, ನಳಚರಿತ್ರೆ ಮತ್ತು ಹರಿಭಕ್ತಿಸಾರ ಇತ್ಯಾದಿಗಳಾಗಿವೆ. ಕನಕದಾಸರ ಕೀರ್ತನೆಗಳು, ಮುಂಡಿಗೆಗಳು ಹಾಗೂ ಹಾಡುಗಳು ಇಂದಿಗೂ ಜನಪ್ರಿಯತೆಯನ್ನು ಪಡೆದಿವೆ. ಅಷ್ಟೇ ಅಲ್ಲ ಸಮಾಜವನ್ನು ಸನ್ಮಾರ್ಗದತ್ತ ಕೊಂಡೊಯ್ಯುವಲ್ಲಿ ಸಹಾಯಕವಾಗಿವೆ. ಅವರ ಕಾವ್ಯ ಕೃತಿಗಳಲ್ಲಿ ಭಕ್ತಿ, ನೀತಿ ವಾಸ್ತವಿಕತೆ, ಸಾಮಾಜಿಕ ವಿಡಂಬನೆ ಮತ್ತು ಕಲೆಗಳ ಸುಂದರ ಸಂಗಮವಿದೆ.

ಭಕ್ತಿಯಲ್ಲಿ ಕನಕದಾಸರನ್ನು ಬೇಡರ ಕಣ್ಣಪ್ಪನಿಗೆ ಹೋಲಿಸಬಹುದು. ಇವರದು ಢಾಂಬಿಕ ಭಕ್ತಿ ಅಲ್ಲ," ಸತ್ಯವಂತರ ಸಂಘವಿರಲು ತೀರ್ಥವ್ಯಾತಕೋ" ಎಂದು ಹಾಡಿ ಢಾಂಬಿಕ ಭಕ್ತಿ ಆಚರಣೆ ಮಾಡುವವರನ್ನು ಅಲ್ಲಗಳೆದಿದ್ದಾರೆ. ಮುಗ್ಧ ಭಕ್ತ ಕನಕದಾಸರು ಶ್ರೀ ಕೃಷ್ಣನ ದರ್ಶನಕ್ಕೆ ಉಡುಪಿಗೆ ಹೋದಾಗ ಮಡಿವಂತಿಕೆಯ ಮಬ್ಬಿನಲ್ಲಿ ಮುಳುಗಿದ್ದ ಪರೋಹಿತರು ಕನಕದಾಸರಿಗೆ ಶ್ರೀಕೃಷ್ಣನ ದೇವಾಲಯದಲ್ಲಿ ಪ್ರವೇಶ ನೀಡಲಿಲ್ಲ. ಅದಕ್ಕಾಗಿ ಕನಕದಾಸರು ನೊಂದುಕೊಂಡು ದೇವಾಲಯದ ಹಿಂಭಾಗದಲ್ಲಿ ನಿಂತು ಶ್ರೀ ಕೃಷ್ಣನನ್ನು ಪ್ರಾರ್ಥಿಸಿದಾಗ ದೇವಾಲಯದ ಗೋಡೆ ಒಡೆದು ಶ್ರೀಕೃಷ್ಣ ಪರಮಾತ್ಮ ಕನಕದಾಸರಿಗೆ ದರ್ಶನ ನೀಡಿದ್ದಕ್ಕೆ ಉಡುಪಿಯಲ್ಲಿರುವ ಕನಕನ ಕಿಂಡಿಯೇ ಸಾಕ್ಷಿಯಾಗಿದೆ. ಇದು ಕನಕದಾಸರ ಅನನ್ಯ ಭಕ್ತಿಯ ಸಂಕೇತವಾಗಿದೆ. ಇಂತಹ ಮಹಾನ್ ಭಕ್ತ ಕನಕದಾಸರು ತಮ್ಮ ಕೊನೆಯ ದಿನಗಳನ್ನು ಕಾಗಿನೆಲೆಯಲ್ಲಿಯೇ ಕಳೆದು ಕ್ರಿ.ಶ. 1578ರಲ್ಲಿ ಕಾಗಿನಲೆ ಆದಿಕೇಶವನಲ್ಲಿ ಲೀನವಾದರು.

ಒಟ್ಟಾರೆ ಕನಕದಾಸರದು ಬಹುಮುಖ್ಯ ಪ್ರತಿಭೆ ಕವಿ, ಕಲಿ, ಸಂತ ಶ್ರೇಷ್ಠ ಕನಕದಾಸರು ಕೇವಲ ಒಂದು ಜಾತಿಗೆ ಸೀಮಿತವಾದ ವ್ಯಕ್ತಿ ಅಲ್ಲ. ಅವರು ಸಮಗ್ರ ಮನುಕುಲಕ್ಕೆ ಮಾರ್ಗದರ್ಶನ ಮಾಡಿದ ಮಹಾನುಭಾವರಾಗಿದ್ದಾರೆ. ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಭ್ರಷ್ಟಾಚಾರ, ಅತ್ಯಾಚಾರ ತಾಂಡವಾಡುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ಕನಕದಾಸರ ಕೀರ್ತನೆಗಳು, ಮುಂಡಿಗೆಗಳು, ಕಾವ್ಯ ಕೃತಿಗಳು ಮತ್ತು ಹಾಡುಗಳು ಸಾಮಾಜಿಕ ಅನಿಷ್ಟಗಳಿಗೆ ಚಿಕಿತ್ಸೆಯನ್ನು ನೀಡುವಂತವುಗಳಾಗಿವೆ. ಇಂತಹ ದಾಸ ಶ್ರೇಷ್ಠ ಕನಕದಾಸರ ಕೃತಿಗಳನ್ನು ಮತ್ತು ಕೀರ್ತನೆಗಳನ್ನು ನಾವೆಲ್ಲ ಓದಬೇಕಾದುದು ಮತ್ತು ಕೇಳಬೇಕಾದುದು ಎಂದಿಗಿಂತಲೂ ಇಂದು ಅತ್ಯವಶ್ಯಕವಾಗಿದೆ. ಅಂದಾಗ ಮಾತ್ರ "ಮಾನವ ಜನ್ಮ ದೊಡ್ಡದು ಹುಚ್ಚಪ್ಪಗಳಿರಾ ಇದನ್ನು ಹಾಳು ಮಾಡಿಕೊಳ್ಳಬೇಡಿ" ಎಂಬ ದಾಸರ ವಾಣಿ ಕಾರ್ಯಗತಗೊಳಿಸಿದ ಶ್ರೇಯಸ್ಸು ನಮ್ಮದಾಗುತ್ತದೆ.

ಪ್ರೊ॥ ಎ.ಆರ್. ಹೆಗ್ಗನದೊಡ್ಡಿ,
ಪ್ರಾಚಾರ್ಯರು, ಎಚ್.ಜಿ ಪ. ಪೂ.
ಮಹಾವಿದ್ಯಾಲಯ, ಸಿಂದಗಿ



MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-11-2023
Date of Posting 20th or 21st of every month
Posted at Periodical Rate

# ಅಂಗವಿಕಲತೆಯನ್ನು ಮೀರಿ ಸಾಧನೆಯ ಶಿಖರವೇರಿದ ಭಾರತದ ದಿಟ್ಟ ಯುವತಿ ಶೀತಲ್ ದೇವಿ



ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್‌ನ ಲೋಯಿಧಾರ್ ಗ್ರಾಮದ 16 ವರ್ಷದ ತೋಳಿಲ್ಲದ ಬಿಲ್ಲುಗಾರ್ತಿ ಶೀತಲ್ ದೇವಿ ಅವರು ಚೀನಾದ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಮೂರು ಪದಕಗಳನ್ನು ಗಳಿಸಿ ವಿಶ್ವದೆಲ್ಲೆಡೆ ಮನೆ ಮಾತಾಗಿದ್ದಾರೆ. ಅವರ ಈ ಹಾದಿಯಲ್ಲಿ ಕಠಿಣ ಪರಿಶ್ರಮದಿಂದ, ಆತ್ಮವಿಶ್ವಾಸದಿಂದ, ಅಂಗವಿಕಲತೆಯನ್ನು ಲೆಕ್ಕಿಸದೇ ಇತಿಹಾಸ ಸೃಷ್ಟಿ ಮಾಡಿದ್ದಾರೆ. ಒಂದೇ ಪಂದ್ಯಕೂಟದಲ್ಲಿ ಎರಡು ಬಾರಿ ಚಿನ್ನದ ಪದಕವನ್ನು ಗಳಿಸಿದ ಪ್ರಪ್ರಥಮ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಶೀತಲ್ ದೇವಿರವರು.

ದುರಾದೃಷ್ಟವಶಾತ್ ಫೋಕೊಮೆಲಿಯಾ ಎಂಬ ಅಭಿವೃದ್ಧಿಯಾಗದ ಕೈಗಳ ಅಸ್ವಸ್ಥತೆಯ ಕಾಯಿಲೆಯೊಂದಿಗೆ ಜನಿಸಿದ ಇವರು, ಇದ್ಯಾವುದನ್ನು ಲೆಕ್ಕಿಸದೆ ಇತ್ತೀಚಿನ ವರ್ಷಗಳಲ್ಲಷ್ಟೆ ಶೀತಲ್ ದೇವಿಯವರು ಈ ಕ್ರೀಡೆಗಾಗಿ ತರಬೇತಿ ಪ್ರಾರಂಭಿಸಿದರು. ಇವರು ಚಿಕ್ಕಂದಿನಲ್ಲಿ ಆಟಕ್ಕಾಗಿ ಮನೆಯ ಹತ್ತಿರ ಮರಗಳನ್ನು ಹತ್ತುವುದರ ಮೂಲಕ ಅವರ ದೇಹದ ಮೇಲ್ಭಾಗವನ್ನು ಈ ಮಟ್ಟದ ಸಾಧನೆಗಾಗಿ ಬಲಪಡಿಸಿಕೊಂಡರು. 2021ರಲ್ಲಿ ಭಾರತೀಯ ಸೇನೆಯು ಆಯೋಜಿಸಿದ್ದ ಸ್ಥಳೀಯ ಕ್ರೀಡಾ ಶಿಬಿರ ಇವರ ಪ್ರತಿಭೆಯ ಗಮನ ಸೆಳೆಯಿತು. ಪ್ರಾಸ್ಥೆಟಿಕ್ ತೋಳು ಇವರ ಕ್ರೀಡಾ ಜಗತ್ತಿನ ಬಾಗಿಲು ತೆರೆಯಿತಾದರು, ಆ ಹಾದಿ ಸುಗಮವಾಗಿರಲಿಲ್ಲ. ಅನೇಕ ವಿಫಲ ಪ್ರಯತ್ನಗಳ ನಂತರವೂ ಭರವಸೆ ಕಳೆದುಕೊಳ್ಳದ ಶೀತಲ್‌ರವರು ಕತ್ರಾದಲ್ಲಿರುವ ಶ್ರೀ ಮಾತಾ ವೈಷ್ಣೋದೇವಿ ಶ್ರೈನ್ ಬೋರ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ತರಬೇತಿಯನ್ನು ಪ್ರಾರಂಭಿಸಿದರು. ಆಕೆಯ ತರಬೇತುದಾರರಾದ ಅಭಿಲಾಷಾ ಚೌಧರಿ ಮತ್ತು ಕುಲದೀಪ್ ವೆದ್ವಾನ್ ಅವರು ಸ್ಟ್ರಾಂಟ್ಜ್‌ಮನ್ ತಂತ್ರದ ಸ್ಫೂರ್ತಿ ಪಡೆದು, ಭುಜದ ಕಡೆಯಿಂದ ರಿಲೀಸರ್ ಮಾರ್ಪಡಿಸಿದ ಗಲ್ಲ ಮತ್ತು ಬಾಯಿಯ ಮೂಲಕ ಟ್ರಿಗರ್ ಎಳೆಯಲು ಮತ್ತು ಬಾಣವನ್ನು ಬಿಡಲು ಸ್ಟ್ರಿಂಗ್ ಯಾಂತ್ರಿಕತೆಯನ್ನು ರೂಪಿಸುವುದರಲ್ಲಿ ಯಶಸ್ವಿಯಾದರು.

ನಂತರ ಕಠಿಣ ತರಬೇತಿಯಲ್ಲಿ ತೊಡಗಿಸಿಕೊಂಡ ಶೀತಲ್‌ರವರು ಪ್ರತಿದಿನ ಶಾಟ್‌ಗಳ ಸಂಖ್ಯೆಯನ್ನು ಕ್ರಮೇಣ ಹೆಚ್ಚಿಸುತ್ತಾ ದಿನಕ್ಕೆ 50 ರಿಂದ ಪ್ರಾರಂಭಿಸಿ ನಿಯಮಿತವಾಗಿ 300ಕ್ಕೆ ಏರಿಸಿಕೊಂಡರು. ಆರು ತಿಂಗಳ ನಂತರ, ಅವರು ಸೋನೆಪತ್‌ನಲ್ಲಿ ನಡೆದ ಪ್ಯಾರಾ ಓಪನ್ ನ್ಯಾಷನಲ್ಸ್‌ನಲ್ಲಿ ಬೆಳ್ಳಿ ಪದಕವನ್ನು ಗೆದ್ದರು, ನಂತರ ಒಂದೆರಡು ಚಿನ್ನದ ಪದಕಗಳು ಮತ್ತು ಪ್ಯಾರಾ ಗೇಮ್ಸ್‌ನಲ್ಲಿ ಎರಡನೇ ಸ್ಥಾನವನ್ನು ಗಳಿಸಿದರು. ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಸೇರಿದಂತೆ ಇವರ ಸಾಧನೆಗೆ ವಿಶ್ವದೆಲ್ಲೆಡೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ.

ಸತತ ಪ್ರಯತ್ನ, ಆತ್ಮ ವಿಶ್ವಾಸ, ಕಠಿಣ ಪರಿಶ್ರಮ ಇದ್ದರೆ ಅಂಗವಿಕಲತೆ ಮಾತ್ರವಲ್ಲ, ಏನ್ನನು ಬೇಕಾದರೂ ಮೆಟ್ಟಿ ನಿಲ್ಲಬಹುದು ಎಂಬ ಪ್ರೇರಣಾದಾಯಿ ಜೀವನ ಶೀತಲ್ ದೇವಿಯವರದ್ದು. ನೆಲದ ಮೇಲೆ ನಿಂತು, ಆಕಾಶವನ್ನೇ ಗುರಿಯಾಗಿರಿಸಿಕೊಳ್ಳಬಹುದಾದಂತ ಇವರು ಮುಂದೆ ದೇಶಕ್ಕಾಗಿ ಇನ್ನೂ ಅನೇಕ ಪ್ರಶಸ್ತಿಗಳನ್ನು ಗಳಿಸಲಿ ಎಂಬುದು ಆಶಯ.

ಕೃಪೆ : ಪುಂಗವ

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com